ಕರ್ನಾಟಕ ವಿಧಾನಸಭೆ

ಶುಕ್ರವಾರ 27ನೇ ಜನವರಿ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಸನ್ಮಾನ್ಯ ರಾಜ್ಯಪಾಲರ ಪರವಾಗಿ ಸದನಕ್ಕೆ ವೀಕ್ಷಕರು ಆಗಮಿಸಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಪರವಾಗಿ ಯಾರೋ ವೀಕ್ಷಕರು ಬಂದಿದ್ದಾರಂತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಪರವಾಗಿ ಯಾರೋ ವೀಕ್ಷಕರು ಬಂದಿದ್ದರಂತೆ. ಅವರು ಈ ಸದನದಲ್ಲಿ ಕುಳಿತಿದ್ದಾರಂತೆ ಈ ಸದನ ಸರ್ವೋಚ್ಚ ಅಧಿಕಾರ ಇರುವಂಥಾದ್ದು. ಈ ಸದನಕ್ಕೆ ರಾಜ್ಯಪಾಲರ ಪರವಾಗಿ ಯಾರಾದರೂ ಬಂದಿದ್ದರೆ.....

ಶ್ರೀ ವಾಟಾಳ್ ನಾಗರಾಜ್ : ಈ ಸದನಕ್ಕೆ ಯಾರು ಬಂದಿದ್ದಾರೆಂದು ಮಾನ್ಯ ಅಧ್ಯಕ್ಷರು ಹೇಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸದನಕ್ಕೆ ಮಾನ್ಯ ರಾಜ್ಯಪಾಲರ ಪರವಾಗಿ ಯಾರೂ ವೀಕ್ಷಕರಾಗಿ ಬರುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರು ಬಂದಿದ್ದಾರೆಂದು ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸದನಕ್ಕೆ ತಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಒಂದು ವೇಳೆ ಯಾರಾದರೂ ವೀಕ್ಷಕರು ಬಂದಿದ್ದರೆ ಅವರನ್ನು ಹೊರಗಡೆ ಕಳುಹಿಸಿ ಎಂದು ತಾವು ಹೇಳಬೇಕು. ಇಲ್ಲಿ ಅವರು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಹೇಳಿ, ಈ ಸದನಕ್ಕೆ ಮಾನ್ಯ ರಾಜ್ಯಪಾಲರ ಪರವಾಗಿ ಯಾರು ಬಂದಿದ್ದಾರೆಂದು ಹೇಳಿ. ಯಾರು ಆ ಅಬ್ಸರ್‌ವರ್ಸ್?

ಶ್ರೀ ವಾಟಾಳ್ ನಾಗರಾಜ್ : ಆ ವೀಕ್ಷಕರು ಯಾರು? ಅವರು ಯಾವ ಕಾರಣಕ್ಕೋಸ್ಕರ ಬಂದಿದ್ದಾರೆ?

(ಗೊಂದಲ)

ಅಧ್ಯಕ್ಷರು : ದಯಮಾಡಿ, ದಯಮಾಡಿ ಕೇಳಿ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಾ, ಇಲ್ಲಾ.....

Mr. Speaker : They have not come as observers. ಯಾರಾದರೂ ಅಧಿಕಾರಿಗಳು ಬರುವುದಕ್ಕೆ ಅವಕಾಶ ಇದೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸಾಧ್ಯವಿಲ್ಲ. ಈ ಸದನವನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು : ದಯಮಾಡಿ, ದಯಮಾಡಿ, ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ. ನೀವು ಈ ಸದನವನ್ನು ಗುತ್ತಿಗೆಗೆ ತೆಗೆದುಕೊಂಡಿದ್ದೀರಾ? ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲ. ಆಗುವುದಿಲ್ಲ. ನೀವು ಕುಳಿತುಕೊಳ್ಳಿ. ನೀವು ಕುಳಿತುಕೊಳ್ಳಿ.

(ಗೊಂದಲ)

Mr. Speaker : No, No. I will send you out. They are questioning my authority. They are questioning. ಹಿರಿಯ ಸದಸ್ಯರಾಗಿ ಏನು ಮಾತನಾಡುತ್ತೀರಿ ಕುಳಿತುಕೊಳ್ಳಿ, ದಯಮಾಡಿ ಕುಳಿತುಕೊಳ್ಳಿ, ಈಗ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಯಾರೂ ಬರಬಾರದೆಂದೇನೂ ಇಲ್ಲ, ಆದುದರಿಂದ, ನೀವು ದಯಮಾಡಿ ಕುಳಿತುಕೊಳ್ಳಬೇಕು, ಈಗ ಬಿಸನೆಸ್ ಪ್ರಕಾರ ತೆಗೆದುಕೊಳ್ಳೋಣ, ದಯಮಾಡಿ ಕುಳಿತುಕೊಳ್ಳಿ.....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಗುವುದಿಲ್ಲ. ಮಾನ್ಯ ರಾಜ್ಯಪಾಲರ ಕಛೇರಿಯಿಂದ ಬಂದಿರುವವರು ಇಲ್ಲಿ ಬಂದು ಕುಳಿತುಕೊಂಡಿದ್ದರೆ ನಾವು ಅವರನ್ನು ಇಲ್ಲಿ ಕುಳ್ಳಿರಿಸಿಕೊಂಡು ಬಿಸನೆಸ್ ನಡೆಸುವುದಕ್ಕಾಗುವುದಿಲ್ಲ, ವೀಕ್ಷಕರು ಬಂದಿದ್ದಾರೋ ಇಲ್ಲವೋ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರು ಬಂದಿದ್ದಾರೋ ಇಲ್ಲವೋ ಎಂದು ಸದನಕ್ಕೆ ಹೇಳಬೇಕು. ಈ ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ನಿಮಗೂ ನಾವು ಬಿಡುವುದಿಲ್ಲ.....

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ನಿಮ್ಮ ಮಾತಿನ ಧಾಟಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಿ, You are a Senior Member. ಆದರೆ ನೀವು ಸದನವನ್ನು ಗುತ್ತಿಗೆ ತೆಗೆದುಕೊಂಡಿಲ್ಲ, ನಾನು ನಿಮ್ಮನ್ನು ಎಕ್ಸ್‌ಪೆಲ್ ಮಾಡಬೇಕಾಗುತ್ತದೆ. ಹುಷಾರ್ ಆಗಿ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸದನಕ್ಕೆ ಅಂತಹವರು ಬಂದಿದ್ದಾರೋ ಇಲ್ಲವೋ ಹೇಳಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಏನು ತೀರ್ಮಾನಕ್ಕೆ ಬರುತ್ತೀರಿ ಅದಕ್ಕೆ ನಾವು ಬದ್ಧರಾಗಿದ್ದೇವೆ.....

ಅಧ್ಯಕ್ಷರು : ಮೊದಲು ದಯಮಾಡಿ ನೀವು ಕುಳಿತುಕೊಳ್ಳಬೇಕು. ಈಗ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಯಾರಾದರೂ ಅಧಿಕಾರಿಗಳು ಬಂದು, ಆಫೀಸರ್ಸ್ ಗ್ಯಾಲರಿಯಲ್ಲಿ ಕುಳಿತುಕೊಳ್ಳಬಾರದು ಎಂದು ನಿಯಮಗಳಿಲ್ಲ, ಅವರು ಬಂದು ಕುಳಿತುಕೊಂಡಿರಬಹುದು, ಆದುದರಿಂದ ಆ ವಿಚಾರ ಪ್ರಸ್ತುತವಲ್ಲ, ಇವತ್ತು ಇಲ್ಲಿ ಬಹಳ ಗಂಭೀರವಾದ ಚರ್ಚೆ ಇದೆ, ಆ ಕಾರಣದಿಂದ ದಯಮಾಡಿ, ಇವತ್ತೇನು ಬಿಸನೆಸ್‌ನಲ್ಲಿ ಮೊದಲು ಸಂತಾಪ ಸೂಚನೆ ಇದೆ, ಅದನ್ನು ನಾವು ತೆಗೆದುಕೊಳ್ಳೋಣ, ದಯಮಾಡಿ ತಾವು ಸಹಕರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರ ಪ್ರದೇಶದ ಅಸೆಂಬ್ಲಿಯಲ್ಲಿ ನಡೆದಂತಹ ಘಟನೆಯನ್ನು ಜ್ಞಾಪಕ ಮಾಡಿಕೊಳ್ಳಿ, Governor has been reprimanded, because he has sent observers.

Mr. Speaker : They have not come here as observers.

Sri G.V. Srirama Reddy : No, they should not.

Mr. Speaker : They might have come to see this proceedings.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸದನಕ್ಕೆ ಮಾಡತಕ್ಕಂಥ ಅವಮಾನವಿದು, ತಾವು ಈ ಸದನಕ್ಕೆ ಮಾಡತಕ್ಕಂಥ ಅವಮಾನವಿದು, ಸದನಕ್ಕೆ ಅಗೌರವ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಜಾತಂತ್ರದ ಕೊಲೆ.....

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಗೌರ್ನರ್ ಆಫೀಸ್‌ನಿಂದ ಯಾರು ಬಂದಿದ್ದಾರೆ ಅವರು ಹೊರಗೆ ಹೋಗಬೇಕು, ಗೌರ್ನರ್ ಆಫೀಸ್‌ನಿಂದ ಯಾರು ಬಂದಿದ್ದಾರೆ ಅವರು ಇಲ್ಲಿದ್ದುಕೊಂಡಿರಲಿ, ಅಂದರೆ ಸದನ ನಡೆಯುವುದಕ್ಕೆ ಬಿಡುವುದಿಲ್ಲ, ಅವರನ್ನು ಯಾರು ಇಲ್ಲಿಗೆ ಕುಳುಹಿಸಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಹೊರಗೆ ಕಳುಹಿಸಿ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರ ಪ್ರದೇಶದ ಅಸೆಂಬ್ಲಿಯಲ್ಲಿ ಅಬ್ಸರ್ವರ್ಸ್ ಅನ್ನು ಕಳುಹಿಸಿದ್ದಕ್ಕೆ ಗೌರ್ನರ್‌ಗೆ ರೆಪ್ರಿಮ್ಯಾಂಡ್ ಮಾಡಿದ್ದಾರೆ, ಯಾವ ಅಬ್ಸರ್ವರ್ಸ್ ಇಲ್ಲಿ ಕುಳಿತುಕೊಳ್ಳಬಾರದು. ಸದನ ಸರ್ವೋಚ್ಚ ಇದನ್ನು ಮಾನಿಟರ್ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ, ಸ್ಪೀಕರ್ ಬಿಟ್ಟು ಇಲ್ಲಿ ಅಧಿಕಾರ ಚಲಾಯಿಸಲು ಬೇರೆ ಯಾರಿಗೂ ಅಧಿಕಾರವಿಲ್ಲ.....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಗೌರ್ನರ್ ಇಲ್ಲಿಗೆ ಅಬ್ಸರ್ವರ್ಸ್ ಅನ್ನು ಕಳುಹಿಸಿದ್ದರೆ ನಮಗೆ ಅವಮಾನ ಮಾಡಿದಂತಾಯಿತು.....

ಅಧ್ಯಕ್ಷರು : ನಾನು ಪದೇ ಪದೇ ಹೇಳುತ್ತಿದ್ದೇನೆ, ಇಲ್ಲಿ ಅವರು ಅಬ್ಸರ್ವರ್ಸ್ ಆಗಿ ಬಂದಿಲ್ಲ, ಮಾನ್ಯ ರಾಜ್ಯಪಾಲರ ಕಛೇರಿಯ ಅಧಿಕಾರಿಗಳು ಬಂದು ಇಲ್ಲಿ ಕುಳಿತುಕೊಳ್ಳಬಾರದೆಂದೇನೂ ಇಲ್ಲ, ಆದುದರಿಂದ ತಾವು ದಯಮಾಡಿ ಕುಳಿತುಕೊಂಡು ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಸಾಧ್ಯವೇ ಇಲ್ಲ ..... ಅದು ಆಗುವುದಿಲ್ಲ. ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ, ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ....

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ಈಗ ರಮೇಶ್‌ಕುಮಾರ್‌ರವರು ಮಾತನಾಡಲಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಈ ಸಭೆಯ ಕಲಾಪಗಳು ನಡೆಯುವ ವೇಳೆಗೆ, ತಾವು ಈ ಸದನದಲ್ಲಿ ಸರ್ವೋಚ್ಚ, ಮಾನ್ಯ ರಾಜ್ಯಪಾಲರ ಹಕ್ಕುಗಳ ಇತಿಮಿತಿಗಳ ಬಗ್ಗೆ ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ಅಧಿಕೃತವಾಗಿ ಆಗಲಿ, ಅನಧಿಕೃತವಾಗಿ ಆಗಲಿ, ಅವರ ರಾಯಭಾರಿಗಳಾಗಲಿ, ಅವರ ಪ್ರತಿನಿಧಿಗಳಾಗಲಿ, ಅವರು ನೇಮಕ ಮಾಡಿದಂತಹ ವೀಕ್ಷಕರಾಗಲಿ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸದನದಲ್ಲಿ ಬಂದು ಕುಳಿತು ನಮ್ಮ ಕಲಾಪಗಳನ್ನು ವೀಕ್ಷಣೆ ಮಾಡುವುದು ಸಾಧುವಲ್ಲ, ಸಿಂಧುವಲ್ಲ. ಅವರು ಯಾವುದೇ ಕಾರಣಕ್ಕೆ ಇಲ್ಲಿ ಸದನದಲ್ಲಿದ್ದುಕೊಂಡು, ನಾವು ನಮ್ಮ ಕಲಾಪವನ್ನು ಪ್ರಾರಂಭ ಮಾಡಿದರೆ, ಅದು ಸಂವಿಧಾನಕ್ಕೆ ವಿರುದ್ಧವಾದ ಒಂದು ಕೆಲಸವಾಗುತ್ತದೆ. ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ನಮ್ರತೆಯಿಂದ ವಿನಂತಿ

ಮಾಡಿಕೊಳ್ಳುತ್ತೇನೆ, ಸ್ವಯಂಪ್ರೇರಿತರಾಗಿ ರಾಜಭವನದಿಂದ ಇಲ್ಲಿಗೆ ಬಂದಿರುವವರು ಅವರೇ ಇಲ್ಲಿಂದ ನಿರ್ಗಮಿಸಿದರೆ, ಮಾನ್ಯ ರಾಜ್ಯಪಾಲರಿಗೂ ಗೌರವ ಹೆಚ್ಚಾಗುತ್ತದೆ, ನಮಗೂ ಹೆಚ್ಚಾಗುತ್ತದೆ, ಈ ಸದನದ ಗೌರವ ಹೆಚ್ಚಾಗುತ್ತದೆ, ಸಂವಿಧಾನವನ್ನು ಎತ್ತಿಹಿಡಿದಂತಾಗುತ್ತದೆ. ಒಂದು ವೇಳೆ ಅವರು ಆ ನಿರ್ಣಯಕ್ಕೆ ಬರಲಿಲ್ಲವೆಂದರೆ. ತಾವು ಅವರನ್ನು ಕರೆಯಿಸಿ, ದಯಮಾಡಿ ತಾವು ನಿರ್ಗಮಿಸಿ ಎಂದು ತಾವು ಹೇಳಬೇಕು, ಅವರನ್ನು ಇವತ್ತು ಸದನದಲ್ಲಿ ತಾವು ಇಟ್ಟುಕೊಂಡು ಸದನದ ಕಲಾಪವನ್ನು ಪ್ರಾರಂಭ ಮಾಡುವುದು ಅಸಿಂಧುವಾಗುತ್ತದೆ, ಸಂವಿಧಾನಕ್ಕೆ ತೋರಿಸತಕ್ಕಂಥ ಅಗೌರವವಾಗುತ್ತದೆ ಎನ್ನುವ ಮಾತನ್ನು ನಾನು ಅತ್ಯಂತ ನಮ್ರತೆಯಿಂದ ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಸಭಾಧ್ಯಕ್ಷರೆ, ಗೌರ್ನರ್‌ರವರು ತಮ್ಮ ಮೇಲೆ ಅಪಾರವಾದ ನಂಬಿಕೆಯನ್ನಿಟ್ಟು ಇವತ್ತು ಈ ಮನೆಯನ್ನು ನಡೆಸಿ ನನಗೆ ವರದಿಯನ್ನು ಕೊಡಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಆ ಪ್ರಕಾರ ಇವತ್ತು ಈ ಸದನವನ್ನು ಕರೆದು ಇಲ್ಲಿ ಏನು ಕಾರ್ಯಕಲಾಪಗಳನ್ನು ನಡೆಸುತ್ತೀರೋ ಆ ವರದಿಯನ್ನು ಅವರಿಗೆ ಕಳುಹಿಸಿಕೊಡುತ್ತೀರಿ. ಈ ಮಧ್ಯೆ ಇಡೀ ರಾಜ್ಯ, ರಾಷ್ಟ್ರ ಎಲ್ಲಾ ನೋಡುತ್ತಿದೆ, ಸದಸ್ಯರಿದ್ದಾರೆ, ಸ್ಪೀಕರ್ ಗ್ಯಾಲರಿನಲ್ಲಿ ಇದ್ದಾರೆ, ಅಫೀಸರ್ಸ್ ಇದ್ದಾರೆ, ಜೊತೆಗೆ ಇಷ್ಟೆಲ್ಲಾ ನಡೆಯುವಾಗ, ನಾವು ಇವತ್ತು ಎಲೆಕ್ಟ್ರಾನಿಕ್ ಮಿಡಿಯವನ್ನೂ ಕೂಡ ಒಳಗಡೆಗೆ ಬಿಟ್ಟಿದ್ದೇವೆ, ಈ ಮಧ್ಯದಲ್ಲೂ ಕೂಡ ನಿಮ್ಮ ಮೇಲೆ, ಪ್ರಜಾಪ್ರಭುತ್ವದ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲದೆ ಈ ರೀತಿ ನಡೆಯುವುದು, ಬಹುಶಃ ಶಾಸಕಾಂಗಕ್ಕೆ ಬಹಳ ದೊಡ್ಡ ಅವಮಾನವಾದಂತಾಗುತ್ತದೆ. ಆದುದರಿಂದ, ಕೆಲವು ಸಂದರ್ಭಗಳಲ್ಲಿ ಕಟು ಸತ್ಯವಿರಬಹುದು, ಕಟುವಾದ ತೀರ್ಮಾನ ತೆಗೆದುಕೊಳ್ಳಬೇಕಾಗಬಹುದು, ಈ ತೀರ್ಮಾನವನ್ನು ತೆಗೆದುಕೊಂಡು, ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಹೇಳಿದಂತೆ ಅವರನ್ನು ಗೌರವಾನ್ವಿತವಾಗಿ ಈ ಸದನದಿಂದ ಹೊರಗೆ ಕಳುಹಿಸಿಕೊಟ್ಟರೆ, ಈ ಒಂದು ವ್ಯವಸ್ಥೆಗೆ, ಈ ಮನೆಗೆ ಗೌರವ ಬಂದಂತಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಇದು ತಮ್ಮ ವಿವೇಚನೆ ಎಂದು ತಾವು ಭಾವಿಸಿದ್ದರೂ ಕೂಡ, ಸ್ಥಾನದ ಗೌರವವನ್ನು ಲೆಕ್ಕಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಶಾಸಕಾಂಗದ ವ್ಯವಸ್ಥೆಯಲ್ಲಿ, ತಾವು ಕುಳಿತಿರುವ ಕುರ್ಚಿ ಶ್ರೇಷ್ಠವಾದ ಕುರ್ಚಿ. ತಮ್ಮ ಮೇಲೆ ಯಾರೋ ನಿಯಂತ್ರಣ ತರುವುದು, ತಾವು ಮಾಡುವ ಕಾರ್ಯಗಳನ್ನು ವೀಕ್ಷಣೆ ಮಾಡುವುದು, ವರದಿ ಮಾಡುವುದು, ಏನಿದೆ, ಇದು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡುವ ಅವಮಾನವೆಂದು ತಾವು ತಿಳಿದುಕೊಳ್ಳಬೇಕಾಗುತ್ತದೆ, ಇದರಿಂದ ಇಡೀ ಶಾಸನ ಸಭೆಗೆ ಅವಮಾನವಾಗುತ್ತದೆ. ಗೌರ್ನರ್‌ರವರಿಗೆ ಇದ್ದ ಇತಿಮಿತಿಯಲ್ಲಿ ಶಾಸನ ಸಭೆಯನ್ನು ಕರೆದು ವಿಶ್ವಾಸ ಮತ ತೆಗೆದುಕೊಳ್ಳಿ ಎಂದು ಅವರು ಹೇಳಿದ್ದಾರೆಯೊ ಹೊರತು, ಅವರ ಸಬಾರ್ಡಿನೇಟ್ ಆಗಿ ತಾವಾಗಲಿ ಈ ಸದನವಾಗಲಿ ನಡೆಯಬೇಕೆಂದು ಭಾವಿಸಬಾರದು. ಮತ್ತೆ ನಾವು ಹೇಗೆ ವರ್ತಿಸುತ್ತೇವೆ, ಹೇಗೆ ನಡೆದುಕೊಳ್ಳುತ್ತೇವೆ, ಎನ್ನುವುದು We are not controlled by Hon'ble Governor of this State. ನಾವು ತಮ್ಮಿಂದ ಕಂಟ್ರೋಲ್ ಆಗುವುದು, ನಾವು ಸ್ಪೀಕರ್ ಛೇಂಬರ್‌ನಿಂದ ಕಂಟ್ರೋಲ್ ಆಗುವವರು, ನಾವು ಯಾರಿಗೊ ಹೇಳಬೇಕಾಗಿಲ್ಲ, ನೀವು ಮಾತು ನಿಲ್ಲಿಸಿ ಎಂದಾಗ ಮಾತು ನಿಲ್ಲಿಸುವವರು, ಮಾತನಾಡಿ ಎಂದಾಗ ಮಾತನಾಡುವವರು, ಅಷ್ಟು ಬಿಟ್ಟರೆ, ಅಲ್ಲಿ ಯಾರೋ ಕುಳಿತುಕೊಂಡು ನಿಮಗೆ ಹೇಳುವುದು, ಅದನ್ನು ನೀವು ನಮಗೆ ಹೇಳುವ ಸ್ಥಿತಿ ಶಾಸನಸಭೆಯಲ್ಲಿ

ನಿರ್ಮಾಣವಾಗಬಾರದು. ಗೌರ್ನರ್‌ಗೆ ವರದಿಯನ್ನೂ ಮಾಡುವುದಿಲ್ಲ, ಸುಪ್ರೀಂಕೋರ್ಟ್ ತೀರ್ಮಾನಗಳಾದ ಮೇಲೆ ಈ ಶಾಸನಸಭೆಗಳಲ್ಲಿ ಏನು ನಿರ್ಣಯಗಳಾಗುತ್ತವೆ, ಅವು ಅವರಿಗೆ ಹೋಗುವ ವರದಿಯಲ್ಲಿ ಹೋಗುತ್ತದೆ, ಅದು ತೀರ್ಮಾನ ಆಗಿಹೋಗಿಬಿಡುತ್ತದೆ, ಯಾರನ್ನೋ ಕಳುಹಿಸುವುದು, ಶಾಸನಸಭೆಯಲ್ಲಿ ಏನಾಗುತ್ತದೆ ಎಂಬುದನ್ನು ನೋಡುವುದು ಈ ಸ್ಥಿತಿ ನಿರ್ಮಾಣವಾದರೆ ಅದು ಕಂಟಕಪ್ರಾಯವಾದ ಸ್ಥಿತಿ ಯಾರೋ ಬಂದು ಇಲ್ಲಿ ಅಕಾಡೆಮಿಕ್ ಇಂಟರೆಸ್ಟ್‌ನಿಂದ ಕುಳಿತುಕೊಂಡು ನೋಡುತ್ತಾರೆಂದರೆ ವಿಸಿಟರ್ಸ್ ಗ್ಯಾಲರಿಯಲ್ಲಿ ಕುಳಿತುಕೊಂಡು ನೋಡಲಿ, ಇಲ್ಲಿ ಕುಳಿತುಕೊಳ್ಳುವ ಅಧಿಕಾರ ಕೊಟ್ಟಿರುವುದು ಈ ರಾಜ್ಯದಲ್ಲಿ, ಯಾವ್ಯಾವ ಅಧಿಕಾರಿ, ಯಾವ್ಯಾವ ದಿವಸ ಕುಳಿತುಕೊಳ್ಳಬೇಕೆಂದು ಅಡ್ಜಿಸ್ಟೇಟಿವ್ ಆರ್ಡರ್ ಆಗಿ ಕೂರಿಸುತ್ತೀರಿ ಅವರಿಗೆ ಮಾತ್ರ ಇಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶಕೊಡಬೇಕು. ಅದು ಬಿಟ್ಟರೆ, ಗೌರ್ನರ್‌ರವರ ಪ್ರತಿ ನಿಧಿ ಇರಲಿ, ರಾಷ್ಟ್ರಪತಿಗಳ ಪ್ರತಿನಿಧಿಗಳಿರಲಿ, ನಮ್ಮ ಆಫೀಸರ್ಸ್ ಗ್ಯಾಲರಿಯಲ್ಲಿ ಕುಳಿತು, ಇಲ್ಲಿಂದ ನಾನು ವರದಿ ಮಾಡುತ್ತೇನೆ ಎನ್ನುವ ಸ್ಥಿತಿಯನ್ನು ತಾವು ಈ ಶಾಸನಸಭೆಯಲ್ಲಿ ದಯಮಾಡಿ ನಿರ್ಮಾಣ ಮಾಡಬಾರದೆಂದು ತಮ್ಮಲ್ಲಿ ಕೇಳಿಕೊಂಡು, ಅವರನ್ನು ಗೌರವಯುತವಾಗಿ ಹೊರಗೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಹಣಕಾಸು ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಈ ಸದನದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರ ಸ್ಥಾನಮಾನದ ಬಗ್ಗೆ ಬಹಳ ಗೌರವವನ್ನು ವೈಯಕ್ತಿಕವಾಗಿ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಈಗ ಮಾನ್ಯ ರಾಜ್ಯಪಾಲರು, ಸದನ ನಡೆಯತಕ್ಕಂಥ ಸಂದರ್ಭದಲ್ಲಿ, ಒಂದು ಸರ್ಕಾರ ವಿಶ್ವಾಸವನ್ನು ಕಳೆದುಕೊಂಡಾಗ, ಒಬ್ಬ ನಾಯಕರು ವಿಶ್ವಾಸವನ್ನು ಕಳೆದುಕೊಂಡಂತಹ ಸಂದರ್ಭದಲ್ಲಿ, ಆ ವಿಶ್ವಾಸ ಮತ ಇದೆಯೋ ಇಲ್ಲವೋ ಎಂಬುದನ್ನು ಸಾಬೀತು ಮಾಡತಕ್ಕಂಥ ಕರ್ತವ್ಯ ನಮ್ಮ ಅಭಿಪ್ರಾಯದಲ್ಲಿ, ಸಂವಿಧಾನದ ಪ್ರಕಾರವಾಗಿ ತಮ್ಮದು. ಮಾನ್ಯ ರಾಜ್ಯಪಾಲರಿಗೆ ಇವತ್ತು ಸಮಯವನ್ನು ನಿಗದಿ ಮಾಡಿ ಇಂಥ ದಿನ ಮಾಡಿ ಎಂದು ಹೇಳತಕ್ಕಂಥ ಹಕ್ಕಿಲ್ಲ ಎನ್ನುವುದರ ಬಗ್ಗೆ ದೇಶದ ಸಂವಿಧಾನ ತಜ್ಞರು ಕಳೆದ ಎಂಟತ್ತು ದಿನಗಳಿಂದ ಇಡೀ ರಾಷ್ಟ್ರದಲ್ಲಿ ಸಂವಾದವನ್ನು ಮಾಡಿದ್ದಾರೆ. ಅದರಿಂದಾಗಿ ಇವತ್ತು ವಿಶ್ವಾಸ ಮತಕ್ಕೆ ಇಂಥ ದಿನ, on or before 27th ಎಂದು ಹೇಳಿರುವುದರ ಬಗ್ಗೆಯೇ ಚರ್ಚೆ ನಡೆಯತಕ್ಕ ಒಂದು ಸಂದರ್ಭ. ಈಗ ಮಾನ್ಯ ರಾಜ್ಯಪಾಲರು ತಮಗೆ ಪತ್ರವನ್ನು ಬರೆದಿದ್ದಾರೆ. ನನ್ನ ಅಭಿಪ್ರಾಯದಲ್ಲಿ ತಮಗೆ ಇರತಕ್ಕಂಥ ಹಕ್ಕು ಅದು. ಇವತ್ತು ಕೆಲವು ಲೋಕಸಭಾ ಸದಸ್ಯರನ್ನು ಉಚ್ಚಾಟನೆ ಮಾಡಿದಂಥ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಂಗದವರು ಲೋಕಸಭಾ ಸ್ಪೀಕರ್ ಅವರಿಗೆ ನೋಟೀಸ್ ಜಾರಿ ಮಾಡಿದರು. ಮಾನ್ಯ ಲೋಕಸಭಾ ಅಧ್ಯಕ್ಷರು ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಎಲ್ಲಾ ಪಕ್ಷದವರು ಸಹಿತ ಸೇರಿ ಲೋಕಸಭಾ ಅಧ್ಯಕ್ಷರು, ಈ ದೇಶಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಮೊದಲನೇ ಸ್ಥಾನಗಳಿಸಿ ಕೊಟ್ಟಿದ್ದಾರೆ. ಅಷರದೇ ಕೊನೆಯ ತೀರ್ಪು ಎಂದು ಹೇಳಿದಂಥ ಸನ್ನಿವೇಶದಲ್ಲಿ ಸುಪ್ರೀಂ ಕೋರ್ಟಿನ ನೋಟೀಸನ್ನು ನಾನು ತೆಗೆದುಕೊಳ್ಳುವುದಿಲ್ಲವೆನ್ನುವ ಮಾತನ್ನು ಲೋಕಸಭಾಧ್ಯಕ್ಷರು ಹೇಳಿರುವ ನೆನಪು ಇವತ್ತು ಹಸಿರಾಗಿಯೇ ಉಳಿದಿದೆ. ಅದರಿಂದಾಗಿ ನನ್ನ ಅಭಿಪ್ರಾಯದಲ್ಲಿ ತಾವು ಈ ಸದನಕ್ಕೆ ಮತ್ತು ಸದನ ನಡೆಯತಕ್ಕ ಸಂದರ್ಭದಲ್ಲಿ ಸರ್ಕಾರ, ಸರ್ಕಾರದ ಬಹುಮತ, ಶಾಸಕರ ವರ್ತನೆ, ನಡವಳಿಕೆ ಪ್ರತಿಯೊಂದೂ ಬರುತ್ತದೆ. ಸದನ ನಡೆಯತಕ್ಕ ಸಂದರ್ಭದಲ್ಲಿ ತಾವು ಸರ್ವೋಚ್ಚರು. ಅದರಿಂದಾಗಿ ಈಗ ಇದರ ಬಗ್ಗೆ ನಾನು ಸಂವಾದದ ಬಗ್ಗೆ

ಹೇಳಲಿಕ್ಕೆ ಹೋಗುವುದಿಲ್ಲ, ಅವರು on or before 27th ಎಂದು ಹೇಳಿರುವುದು ಸರಿಯೋ ತಪ್ಪೋ ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಹೇಳುತ್ತೇನೆ. ಇಲ್ಲಿ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಅಧಿಕಾರಿಗಳು ಬಂದು ಎಡಗಡೆ ಕುಳಿತಿದ್ದಾರೆ. ಇಲ್ಲಿ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಇಂಥಿಂಥ ಕಾರ್ಯದರ್ಶಿಗಳಿಗೆ ಇಂಥ ಇಂಥ ಸ್ಥಾನಮಾನಗಳು ಎಂದು ಹೇಳಿ ನಿಯುಕ್ತ ಆಗಿದೆ. ಕೆಲವು ಸಂದರ್ಭದಲ್ಲಿ ಮಂತ್ರಿಗಳ, ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಬಂದು ಕುಳಿತುಕೊಂಡಿರುವುದನ್ನು ನಾವು ನೋಡಿದ್ದೇವೆ. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಇಲ್ಲಿ ರಾಜ್ಯಪಾಲರ ಪ್ರತಿನಿಧಿಯಾಗಿ ಬಂದಿದ್ದಾರೋ, ರಾಜ್ಯಪಾಲರು ತಮಗೇನಾದರೂ ಪತ್ರವನ್ನು ಬರೆದಿದ್ದಾರೋ ಅಥವಾ ಈಗ ನನಗೆ ತಿಳುವಳಿಕೆ ಇರುವ ಹಾಗೆ ಸಂವಿಧಾನದಲ್ಲಿ ರಾಜ್ಯಪಾಲರು ಸರ್ಕಾರದ ಯಾವುದೇ ನಡವಳಿಕೆಗಳನ್ನು ನೇರವಾಗಿ ತೆಗೆದುಕೊಳ್ಳತಕ್ಕ ಹಕ್ಕು ಅವರಿಗೆ ಇದೆ. ಅವರು ತೆಗೆದುಕೊಳ್ಳಬಹುದು. ಮತ್ತೆ ನನಗೆ ಗೊತ್ತಿರುವ ಹಾಗೆ ಹಿಂದೆ ರಾಜ್ಯಪಾಲರು ಬಂದು ಇಲ್ಲಿ ಕುಳಿತುಕೊಳ್ಳತಕ್ಕ ಉದಾಹರಣೆಗಳನ್ನು ಕೂಡ ನಾವು ನೋಡಿದ್ದೇವೆ. ಹಿಂದೆ ಎಲ್ಲಾ ಕುಳಿತುಕೊಳ್ಳುತ್ತಿದ್ದರು. ಈಗ ಮಹಾತ್ಮಾಗಾಂಧಿ ಫೋಟೋವನ್ನು ನಾವು ಹಾಕಿದ್ದೇವೆ. ಕುಳಿತುಕೊಳ್ಳುವುದು ಬೇಡ ಎಂದು ಹೇಳಿ, ಮತ್ತೆ ಇಲ್ಲಿಯ ವೀಕ್ಷಣೆ ಎಲ್ಲವನ್ನೂ ಸಹಿತ ಮಾನ್ಯ ರಾಜ್ಯಪಾಲರು ನೇರವಾಗಿ ಪ್ರಸಾರ ಮಾಡತಕ್ಕ ವ್ಯವಸ್ಥೆ ಕೂಡ ಇದೆ. ಅಲ್ಲಿಂದಲೇ ನೋಡಬಹುದು. ಅದರಿಂದ ಈ ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಅವರೇ ಬಂದಿದ್ದಾರೋ ಅಥವಾ ಅವರಿಗೇನಾದರೂ ರಾಜ್ಯಪಾಲರು ಸೂಚನೆಯನ್ನು ಕೊಟ್ಟಿದ್ದಾರೋ ಎನ್ನುವುದರ ಬಗ್ಗೆ ಅಥವಾ ಬೇರೆ ಏನಾದರೂ ಕೆಲಸವಿಲ್ಲದೆ ಸುಮ್ಮನೆ out of anxiety ಬಂದಿದ್ದಾರೋ ಎನ್ನುವುದರ ಬಗ್ಗೆ ಹೇಳಬೇಕು. ಏಕೆಂದರೆ ಇಡೀ ರಾಜ್ಯದ ಜನ ಇಲ್ಲಿ ಏನು ನಡೆಯುತ್ತಿದೆ ಎನ್ನತಕ್ಕದ್ದರ ಬಗ್ಗೆ ಕುತೂಹಲವನ್ನು ಇಟ್ಟುಕೊಂಡಿದ್ದಾರೆ. ಅದರಿಂದ ರಾಜ್ಯಪಾಲರ ಅಧಿಕಾರಿಗಳೂ ಸಹಿತ ಸಾಮಾನ್ಯ ಒಬ್ಬ ಪ್ರಜೆಯಾಗಿ ಇಲ್ಲಿಗೆ ಬಂದಿದ್ದರೆ ಸಾಮಾನ್ಯವಾದ ಪ್ರಜೆಗಳಿಗೆ ಮತ್ತು ವಿಶೇಷ ಗಣ್ಯವ್ಯಕ್ತಿಗಳಿಗೆ ಎಂಎಲ್‌ಎ ಗಳಿಂದ ಅಥವಾ ತಾವು ತಮ್ಮ ವಿವೇಚನೆಯನ್ನು ಯೋಚನೆ ಮಾಡಿ ಪಾಸ್ ಕೊಡತಕ್ಕಂಥ ಹಕ್ಕು ತಮಗೆ ಇದೆ. ಆ ತರಹ ವಾಸನ್ನು ಕೊಟ್ಟು ಬೇಕಾದರೆ ಕೂಡಿಸಿ. ಅಲ್ಲಿ ಒಳ್ಳೆ ಒಳ್ಳೆಯ ಆಸನಗಳೆಲ್ಲಾ ಇವೆ. ವಿವಿಐಪೀಸ್, ಎಕ್ಸ್ ಎಂಎಲ್‌ಎ ಗಳು, ವಿದೇಶಗಳಿಂದ ಬಂದಂಥ ಜನ ಮಹಾ ಮಹಾ ಗಣ್ಯರು ಕುಳಿತುಕೊಳ್ಳುವುದಕ್ಕೆ ಜಾಗ ಇದೆ. ಅಲ್ಲಿಗೆ ಇವರನ್ನು ರವಾನೆ ಮಾಡಿದರೆ ನಮ್ಮದೇನೂ ತಕರಾರು ಇಲ್ಲ. ಆದರೆ ಇದರ ಬಗ್ಗೆ ತಾವೇ ಸದನಕ್ಕೆ ತಿಳಿಸಬೇಕು. ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ. ಏನಾಗುತ್ತದೆ, ಅದು ಬೇರೆ ವಿಚಾರ. ನಾವು ಎಲ್ಲದಕ್ಕೂ ತಯಾರು ಇರತಕ್ಕಂಥವರು. ಸಂತೋಷದಿಂದ ತಯಾರು ಇರತಕ್ಕಂಥವರು. ಇದರ ಬಗ್ಗೆ ದುಃಖ ಮತ್ತೊಂದು ಪರಿತಾಪ ಏನೂ ಇಲ್ಲ. ಅದರಿಂದ ಸದನಕ್ಕೆ ಕೆಟ್ಟ ಒಂದು ಸಂಪ್ರದಾಯ ಪ್ರಾರಂಭವಾಗಬಾರದು. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ ಎನ್ನುವುದನ್ನು ಹೇಳಿ ತಾವು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಧನ್ಯವಾದಗಳು ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ಮುಖ್ಯವಾದ ಸಂಗತಿ ಎಂದರೆ on or before 27th ಮುಖ್ಯಮಂತ್ರಿಗಳು ಅವರ ಬಹುಮತವನ್ನು ಸಾಬೀತು ಮಾಡಬೇಕೆಂದು ಹೇಳಿ ಆದೇಶ ನೀಡಿರುವುದು ಇಡೀ ಜಗತ್ತಿಗೆ

ಗೊತ್ತಿರುವಂಥ ಸಂಗತಿ. ನೀವೇ ಕಳುಹಿಸಿದಂಥ ಕಾರ್ಯಕಲಾಪದ ಮೂಲಕ 19ನೇ ತಾರೀಖು ಜಂಟಿ ಅಧಿವೇಶನ, ರಾಜ್ಯಪಾಲರ ಭಾಷಣ, 20ನೇ ತಾರೀಖು ನಮ್ಮ ಕಾರ್ಯಕಲಾಪಗಳು ನಡೆಯಬೇಕಾಗಿತ್ತು. ನಾನು ಬಂದು ತಮ್ಮಲ್ಲಿ ಭಿನ್ನಹ ಮಾಡಿದೆ. 19 ಆದಮೇಲೆ 20ನೇ ತಾರೀಖು ಕಾರ್ಯಕಲಾಪದ ಮೂಲಕ ಕಾರ್ಯಕ್ರಮವನ್ನು ನಡೆಸಬೇಕು, ಎಂದು. ಆದರೆ ಒಂದು ವಿಶೇಷ ಕಾರಣಕ್ಕಾಗಿ 20ನೇ ತಾರೀಖು ಒಂದು ರಾಷ್ಟ್ರೀಯ ಅಧಿವೇಶನಕ್ಕೆ ಹೋಗಬೇಕೆಂದು ಹೇಳಿದರು. ರಾಜ್ಯದ ರಾಜಕಾರಣ ಈ ರೀತಿ ಗೊಂದಲದ ವಾತಾವರಣ ಇರತಕ್ಕ ಕಾಲದಲ್ಲಿ ಈ ನಾಡಿನ ಜನತೆಯ ಪ್ರತಿನಿಧಿಗಳಾಗಿ ಯಾವುದೋ ನಮ್ಮ ಪಕ್ಷದ ಅಧಿವೇಶನಕ್ಕಿಂತ ಕಾರ್ಯಕಲಾಪದಲ್ಲಿ ಭಾಗವಹಿಸುವುದು ನಮ್ಮ ಕರ್ತವ್ಯವೆಂದು ಹೇಳಿ ಲಿಖಿತ ಮೂಲಕ ನಿಮಗೆ ಪತ್ರವನ್ನು ಕೊಟ್ಟು ನೀವು 20ನೇ ತಾರೀಖು ಅಧಿವೇಶನ ನಡೆಯಬೇಕೆಂದು ಹೇಳಿ ತಮ್ಮಲ್ಲಿ ಭಿನ್ನಹ ಮಾಡಿದೆ. ತಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ ಯಡಿಯೂರಪ್ಪನವರೇ, ಎರಡೂವರೆ ಗಂಟೆಗೆ ಕರೆಯುತ್ತೇನೆ, ತಾವು ಬರಬೇಕೆಂದು ಹೇಳಿದಿರಿ. ನಾನು ಕೊಠಡಿಯಲ್ಲಿ ಕಾಯುತ್ತಿರುತ್ತೇನೆ ಎಂದು ನಿಮಗೆ ಮತ್ತು ಅಧಿಕಾರಿಗಳಿಗೆ ಹೇಳಿ ನಾನು ಹೋದೆ. ಅದಾದಮೇಲೆ ಸುಮಾರು ಮೂರು ಗಂಟೆಗೆ ಬೆಲ್ ಹೊಡೆಯುತ್ತಿದೆ ಎಂದು ಗೊತ್ತಾದಮೇಲೆ ಮತ್ತೆ ತಮ್ಮಲ್ಲಿ ಬಂದೆ. ನಾನು ವಿನಂತಿ ಮಾಡಿದೆ. ತಾವು ಹೇಳಿದಿರಿ, ನಾನು ಮಾನ್ಯ ರಾಜ್ಯಪಾಲರ ಆದೇಶಕ್ಕಾಗಿ ಕಾಯುತ್ತಿದ್ದೇನೆ, ಅವರು 27ನೇ ತಾರೀಖಿಗೆ ಮುಖ್ಯಮಂತ್ರಿಗಳು ಬಹುಮತವನ್ನು ಸಾಬೀತು ಮಾಡಬೇಕು. ಆ ದೃಷ್ಟಿಯಿಂದ ಅಧಿವೇಶನವನ್ನು 27ಕ್ಕೆ ಮುಂದೂಡಿ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು 27ಕ್ಕೆ ಮಾಡುತ್ತಿದ್ದೇನೆ ಎಂದು ಹೇಳಿ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಮುಂದೂಡಿ ತಾವು ತೀರ್ಮಾನವನ್ನು ತೆಗೆದುಕೊಂಡಿರಿ. ಸಭಾಧ್ಯಕ್ಷರಾಗಿ ತಮ್ಮ ತೀರ್ಪಿಗೆ ನಾವು ತಲೆಬಾಗಿದ್ದೇವೆ. ಇವತ್ತೂ ಸಹಾ ಯಾರು ಈ ಸದನದಲ್ಲಿ ಒಳಗಡೆ ಇರಬೇಕು. ರಾಜ್ಯಪಾಲರ ಕಡೆಯವರು ಮತ್ತೊಬ್ಬರು, ಮಗದೊಬ್ಬರು ಆ ಸಾರ್ವಭೌಮ ಅಧಿಕಾರ ನಿಮಗೆ ಇದೆ. ತಾವೇನು ತೀರ್ಪನ್ನು ಕೊಡುತ್ತೀರೋ ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ ಒಂದು ಕ್ಷಣ ಕೂಡ ತಡಮಾಡದೆ ಯಾವ ಉದ್ದೇಶಕ್ಕಾಗಿ ಇವತ್ತು ಮುಖ್ಯಮಂತ್ರಿಗಳು ತಮ್ಮ ಬಹುಮತವನ್ನು ಸಾಬೀತು ಮಾಡಬೇಕು, 27ನೇ ತಾರೀಖಿನ ಒಳಗಾಗಿ ಎಂದು ಇದೆ, ಆ ವಿಷಯವನ್ನು ಬಿಟ್ಟು ಬೇರೆ ಯಾವುದೇ ವಿಷಯವಾಗಿ ಯಾವುದನ್ನೂ ತೆಗೆದುಕೊಳ್ಳದೆ ತಾವು ಮುಂದೆ ಹೋಗಬೇಕಾಗಿತ್ತು. ನೋಡಿ ಯಾವ ರೀತಿ ನಡೆಯುತ್ತಿದೆ? ತಾವು ಬಹಳ ಮುಖ್ಯವಾದಂಥ ನಮ್ಮ ನಾಡಿನ ದೊಡ್ಡದೊಡ್ಡ ಮಹಾನ್ ನಾಯಕರು ತೀರಿಕೊಂಡಂಥ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ಬರ್ಚೆ ಮಾಡಿದಾಗ ಅದಕ್ಕೆ ನಾಲ್ಕು ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಆ ಕಡೆಯಿಂದ ಹೇಳಬೇಕಾಗಿತ್ತು. ಇವತ್ತಿನ ವಿಶೇಷ ಸಂದರ್ಭದಲ್ಲಿ ತಮಗೆ ಅದೂ ಕೂಡ ಬೇಡವೆಂದು ಅನ್ನಿಸಿದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ. ಬಹಳ ಸತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದಂಥ ಸದನ ಇದೆ. ಶಾಸನಸಭೆ ಇದು. ಬಹಳ ಜನ ಹಿರಿಯರಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಇರಬೇಕೋ, ಯಾರು ಹೋಗಬೇಕೋ ಅದನ್ನು ಮತದಾರರು ಮಾಲೀಕರು ತೀರ್ಮಾನವನ್ನು ಮಾಡುತ್ತಾರೆ. ಚುನಾಯಿತ ಪ್ರತಿನಿಧಿಗಳು ತೀರ್ಮಾನವನ್ನು ಮಾಡುತ್ತಾರೆ. ಇಂಥ ಒಂದು ಸಂದಿಗ್ಧ ಸಂದರ್ಭದಲ್ಲಿ ಕೇವಲ ನಮ್ಮ ರಾಜ್ಯದ ಜನ ಅಲ್ಲ, ಇಡೀ ದೇಶದ ಜನರು ಇದನ್ನು ನೋಡುತ್ತಿದ್ದಾರೆ. ನೇರವಾಗಿ ಟೆಲಿಕ್ಯಾಸ್ಟ್ ಕೂಡ ಆಗುತ್ತಿದೆ. ಇಂಥ

ಸಮಯದಲ್ಲಿ ಒಂದುಕ್ಷಣ ಕೂಡ ತಡಮಾಡದೆ ನಿಮ್ಮ ತೀರ್ಪನ್ನು ಕೊಟ್ಟಿದ್ದೀರಿ ಅದು ನಿಮ್ಮ ವಿವೇಚನೆಗೆ ಬಿಟ್ಟಿದ್ದು ನೀವು ಹೇಳಿದ್ದು ಸುಪ್ರೀಂ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಮಾಡಿ. ಇವತ್ತು ಅವರಿಗೆ ಬಹುಮತವನ್ನು ಸಾಬೀತು ಮಾಡುವ ಬಗ್ಗೆ ನೇರವಾಗಿ ತಾವು ಚರ್ಚೆಯನ್ನು ಪ್ರಾರಂಭ ಮಾಡಬೇಕು. ಅದನ್ನು ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಬಹುಮತ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ. ಆ ಭಾಗದಲ್ಲಿ, ನಮ್ಮ ಕಡೆ ಈ ಭಾಗದಲ್ಲಿ ಕಾನೂನು ತಜ್ಞರು ಹಾಗೂ ಪರಿಣಿತರಿದ್ದಾರೆ. ಎಲ್ಲವನ್ನೂ ನೋಡಿಕೊಂಡೇ ತಾವು ಅಲ್ಲಿ ಕುಳಿತಿದ್ದೀರಿ. ತಾವು ತೀರ್ಪನ್ನು ಕೊಟ್ಟು ಹಾಗೆ ಯಾರೂ ಇಲ್ಲ ಎಂದು ನನಗೆ ಇರುವಂಥ ಸುದ್ದಿ. ಮಾನ್ಯ ರಾಜ್ಯಪಾಲರ ಕಡೆಯಿಂದ ಯಾರೂ ಇಲ್ಲ ಎನ್ನುವ ಸುದ್ದಿ. ಅಥವಾ ನೀವೇ ಹೇಳಿದಿರಿ. ಅಕಸ್ಮಾತ್ ಯಾರು ಇರಬೇಕು ಬಿಡಬೇಕು ಎನ್ನುವಂಥದ್ದು ನಿಮಗೆ ಬಿಟ್ಟಿರುವಂಥದ್ದು ಮತ್ತು ಈ ಮನೆಯಲ್ಲಿ ನಡೆದಿರುವ ಸತ್ಸಂಪ್ರದಾಯ ಅನೇಕ ಜನ foreign delegates ನಿಂದ ಹಿಡಿದು ಇವತ್ತು ಅನೇಕ ಹಿರಿಯರು ಇಲ್ಲಿ ಬಂದು ಕುಳಿತು ಇಂಥ ವಿಶೇಷ ಸಂದರ್ಭದಲ್ಲಿ ಕಾರ್ಯಕ್ರಮಗಳು ಎಷ್ಟು ಗಂಭೀರವಾಗಿ ನಡೆಯುತ್ತವೆ ಎನ್ನುವುದನ್ನು ವೀಕ್ಷಣೆ ಮಾಡುವಂಥದ್ದು ಸರ್ವೇಸಾಮಾನ್ಯವಾದುದು. ಹಾಗಾಗಿ ರಾಷ್ಟ್ರಪತಿಗಳ ಕಡೆಯಿಂದ ಯಾರಾದರೂ ಆಸಕ್ತಿಯಿಂದ ಬರಬಹುದು, ರಾಜ್ಯಪಾಲರ ಕಡೆಯಿಂದ ಯಾರಾದರೂ ಆಸಕ್ತಿಯಿಂದ ಬರಬಹುದು. ಅದು ಅವರ ಆಸಕ್ತಿಯಮೇಲೆ ಹೋಗುತ್ತದೆ. ನಿಮ್ಮ ಅನುಮತಿ ಮೇಲೆ ಹೋಗುತ್ತದೆ. ಆದ್ದರಿಂದ ತಕ್ಷಣ ನಿಮ್ಮ ತೀರ್ಪನ್ನು ಕೊಟ್ಟು ಇವತ್ತಿನ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ಅತ್ಯಂತ ವಿನಯದಿಂದ ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಈ ವಿಷಯ ಬಹಳ ಹೊತ್ತು ಚರ್ಚೆಯಾಗುವಂಥದ್ದು ಘನತೆವೆತ್ತ ರಾಜ್ಯಪಾಲರಿಗೂ ಸಹಾ ಒಂದಲ್ಲ ಒಂದು ರೀತಿ ನಾವೇನೋ ಒಂದು ಅವರ ಹಕ್ಕು, ಅವರ ಕರ್ತವ್ಯವನ್ನು ಇಲ್ಲಿ ಪ್ರಶ್ನೆ ಮಾಡಿದಂತಾಗುತ್ತದೆ. ಅದು ಆಗಬಾರದು. ನಿಮ್ಮ ತೀರ್ಪನ್ನು ಒಂದು ಕ್ಷಣ ಕೂಡ ತಡಮಾಡದೆ ಕೊಟ್ಟು ಮುಂದಿನ ಕಾರ್ಯಕಲಾಪಗಳು ನಡೆಯುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ತಾವು ಸಂವಿಧಾನದ 212ಕ್ಕೆ ಕಾಲಂ ಅನ್ನು ಒಂದು ಸಲ ನೋಡಿದರೆ ಒಳ್ಳೆಯದು. ಇದರಲ್ಲಿ ಏನು ಹೇಳುತ್ತಾರೆ ಎಂದರೆ, ಕೋರ್ಟುಗಳಿಗೂ ಕೂಡ ನಮ್ಮನ್ನು ಟಚ್ ಅಪ್ ಮಾಡುವುದಕ್ಕೆ ಅಧಿಕಾರ ಇಲ್ಲ.

"Courts not to inquire into proceedings of the Legislature:-

(1) The validity of any proceedings in the Legislature of a State shall not be called in question on any alleged irregularity of procedure.

(2) No officer or Member of the Legislature of a State in whom powers are vested by or under this Constitution for regulating procedure or the conduct of business, or for maintaining order, in the legislature shall be subject to the jurisdiction of any court in respect of the exercise by him of those powers."

When the Courts, itself does not have the authority to inquire into the conduct or regulating the proceedings, how can the Hon'ble Governor send his observers to observe the proceedings of the House? What propriety he is having? How the Chair has permitted that? It is not an insult to the six crore people of Karnataka who have elected and sent us here?

Sri K.R. Ramesh kumar (Srinivasapur) : There is no option left even to the Hon'ble Speaker. The Speaker is the highest authority in the House, we all agree. But the Speaker shall also perform his duties within the framework of the Constitution. You shall not allow anything to happen here which is barred by the very jurisdiction of the Constitution. We cannot be a party for anything which is going to be unconstitutional. Therefore, there is no option left open even to the Hon'ble Speaker. The only course is, either the representatives who are here leave the House automatically or spontaneously to save the grace of the Governor, yourself and ourselves, or the Speaker shall use his authority to see that they leave the House. Otherwise, the proceedings cannot take place.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪೂರ್ತಿ ಮಾಡಲಿಲ್ಲ. ಮಧ್ಯದಲ್ಲಿ ಇಂಟರ್‌ಫಿಯರ್ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಕ್ಲಿಯರ್ ಮಾಡಿ. ಮಾನ್ಯ ರಾಜ್ಯಪಾಲರು ಆದೇಶ ಕೊಟ್ಟು ಯಾರಾದರೂ ತಮ್ಮ ಕಡೆಯಿಂದ ಪ್ರತಿನಿಧಿಗಳು ಇರಬೇಕೆಂದು ಕಳುಹಿಸಿಕೊಟ್ಟಿದ್ದಾರಾ? ಇಲ್ಲ ಎಂದರೆ ಸಹಜವಾಗಿ, ವಾಲಂಟರಿಯಾಗಿ ಈ ಮನೆಯ ಕಾರ್ಯಕಲಾಪಗಳನ್ನು ನೋಡಬೇಕು ಎಂಬ ಆಸಕ್ತಿಯಿಂದ ಯಾರಾದರೂ ತಮ್ಮ ಅನುಮತಿ ಪಡೆದು ಪಾಸ್ ತೆಗೆದುಕೊಂಡು ಬಂದುಕುಳಿತುಕೊಳ್ಳಬಹುದಾ? ರಾಜ್ಯಪಾಲರಿಂದ ಈ ರೀತಿ ಡೈರೆಕ್ಷನ್ ಕೊಟ್ಟು ಇಲ್ಲಿ ಅವರ ಪ್ರತಿನಿಧಿಗಳನ್ನು ಕೂಡಿಸಿದ್ದಾರಾ ಎಂದು ಹೇಳಿಬಿಟ್ಟರೆ ಮುಗಿದು ಹೋಗುತ್ತದೆ. ದಯಮಾಡಿ ಇದನ್ನು ಸ್ಪಷ್ಟ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮುಗಿಸುತ್ತೇನೆ. ಇನ್ನೂ ಪೂರ್ತಿ ನಾನು ಹೇಳಿಲ್ಲ. ಈಗ ನಾನು ಹೇಳತಕ್ಕ ಪಾಯಿಂಟ್ ಇಷ್ಟೇ. When the judiciary itself doesn't have the power to regulate and supervise the procedure and proceedings of the House, how can the Hon'ble Governor can send his observer? Even now he cannot go and sit there because the question has arised in the crucial period. Sitting here and asking him to go there is also not correct

because the very purpose of today's Meeting you have to understand. The very intention of sending a person here we should understand. Sitting here or there doesn't make any difference at all. He should not be in the House. He has no business to sit here according to the constitution. ಈ ಹೌಸ್‌ಗೆ ಸಂವಿಧಾನಬದ್ಧವಾಗಿ ನೀವು ಸುಪ್ರೀಂ ಇದ್ದೀರಿ. ನಿಮ್ಮ ಮೇಲೆ ಸೂಪರ್‌ವಿಶನ್ ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶ ಇಲ್ಲ.

ಶ್ರೀ ಹೆಚ್. ಆಂಜನೇಯ : ಈಗ ಮಾನ್ಯ ರಾಜ್ಯಪಾಲರ ಪ್ರತಿನಿಧಿಗಳು ನಿರ್ಗಮಿಸಿದ್ದಾರೆ. ಕಾರ್ಯಕಲಾಪಗಳನ್ನು ಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಕಛೇರಿಯಿಂದ ಯಾರು ಬಂದರು, ಯಾರು ಹೋದರು ಎಂಬುದು ನಮಗೆ ಗೊತ್ತಿಲ್ಲ. ಮಾನ್ಯ ರಾಜ್ಯಪಾಲರ ಕಛೇರಿಯಿಂದ ಬಂದಿರುವವರ ಮುಖಗಳನ್ನೂ ಕೂಡ ನಾವು ನೋಡಿಲ್ಲ, ಅವರ ಪರಿಚಯ ಸಹ ಇಲ್ಲ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್ ಅವರು, ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿರತಕ್ಕದ್ದು ಬಹಳ ಮುಖ್ಯವಾಗಿ ನಮ್ಮ ಈ ಸದನಕ್ಕೆ ಸಂಬಂಧಪಟ್ಟಂತಹ ಪ್ರಶ್ನೆ. ರಾಜ್ಯಾಂಗಕ್ಕೆ ಸಂಬಂಧಪಟ್ಟ ಪ್ರಶ್ನೆ. ನಮ್ಮ ಹಕ್ಕುಗಳಿಗೆ ಸಂಬಂಧಪಟ್ಟ ಪ್ರಶ್ನೆ. ಇವತ್ತು ನಾವು ಗಂಭೀರವಾಗಿ ಪರಿಗಣಿಸತಕ್ಕ ವಿಚಾರ ಇದೆ. ನಮ್ಮ ಈ ಸದನ ಒಂದು ಒಳ್ಳೆಯ ಸಂಪ್ರದಾಯವನ್ನು ಕಾಪಾಡಿಕೊಂಡು ಬಂದಿದೆ. ಈ ಸದನಕ್ಕೆ ತನ್ನದೇ ಆದ ಒಂದು ಗಾಂಭೀರ್ಯತೆ ಇದೆ. ಅದನ್ನು ನಾವು ಕಾಪಾಡಿಕೊಂಡು ಬಂದಿದ್ದೇವೆ. ಅದನ್ನು ಎತ್ತಿ ಹಿಡಿಯತಕ್ಕ ಜವಾಬ್ದಾರಿ ಕೂಡ ನಮಗೆ ಇದೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನಾವು ಸಾಮಾನ್ಯವಾಗಿ ಸೇರಿರತಕ್ಕ ಸಭೆ ಇದಲ್ಲ. ಒಂದು ವಿಶೇಷ ಕಾರಣಕ್ಕೋಸ್ಕರ ಸೇರಿರತಕ್ಕ ಸದನ. ಇದೊಂದು ವಿಚಾರ. ಎರಡನೆಯದು, ಮಾನ್ಯ ರಾಜ್ಯಪಾಲರು ಇಂತಹ ದಿನ ಸಭೆ ಕರೆಯಬೇಕು. On or before 27th ಎಂದು ಹೇಳಿದ್ದಾರೆ. ಬಹುಶಃ ಮಾನ್ಯ ರಾಜ್ಯಪಾಲರು 27ರೊಳಗೆ ಬಹುಮತ ಸಾಬೀತು ಮಾಡಬೇಕೆಂಬ ಉದ್ದೇಶದಿಂದ ಹೇಳಿದ್ದರೂ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯ ಇರಲಿಲ್ಲ. ಯಾವ ತಾರೀಖಿನ್ನು ನಿಗದಿ ಮಾಡಬೇಕು, ಹೇಗೆ ಚರ್ಚೆ ಮಾಡಬೇಕು? ಎಷ್ಟು ಗಂಟೆ ಚರ್ಚೆ ಮಾಡಬೇಕು? ನಡಾವಳಿಯಲ್ಲಿ ಯಾವ ರೀತಿ ಇರಬೇಕು? ಎಂಬುದನ್ನು ನಿಯಂತ್ರಣ ಮಾಡತಕ್ಕ ಅಧಿಕಾರ ಅವರಿಗೆ ಇಲ್ಲ. ಈ ಸಭೆಯಲ್ಲಿ ಪ್ರವೇಶ ಮಾಡುವುದಕ್ಕೆ ಯಾರಿಗೂ ಸಾಧ್ಯ ಇಲ್ಲ. ಮಾನ್ಯ ರಾಜ್ಯಪಾಲರ ಪ್ರತಿನಿಧಿಗಳು ನಿಮ್ಮ ಅನುಮತಿಯನ್ನು ಪಡೆದುಕೊಂಡು ಬಂದಿದ್ದಾರೆಯೇ? ಬಂದಿಲ್ಲವಾ? ಅವರು ಇಲ್ಲಿ ಕುಳಿತುಕೊಳ್ಳಬಾರದು. ಮೇಲುಗಡೆ ಸಹ ಕುಳಿತುಕೊಳ್ಳಬಾರದು. ಯಾರ ಮೇಲೆ ಅನುಮಾನ ಪಡುವುದಕ್ಕೆ ಅವರು ಇಲ್ಲಿ ಕುಳಿತುಕೊಳ್ಳಬೇಕು? ನಿಮ್ಮ ಮೇಲೆ ಅನುಮಾನ ಪಡಬೇಕಾಗಿಲ್ಲ. ಯಾವ ಕಾರಣಕ್ಕೂ ಕೂಡ ಇಂತಹ ಸನ್ನಿವೇಶದಲ್ಲಿ ಅವರು ಗ್ಯಾಲರಿಯಲ್ಲಿ ಕೂಡ ಕುಳಿತುಕೊಳ್ಳಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಅನುಭವಸ್ಥರು. ಆದರೆ ಅವರು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆ. ಅವರು ಇದೆಲ್ಲಾ ಬೇಡ, ಸಂತಾಪ ಸೂಚಕ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳಿದರು.

(ಗೊಂದಲ)

ಅವರು ನೇರವಾಗಿ ಸಂತಾಪ ಸೂಚಕ ನಿರ್ಣಯದ ಚರ್ಚೆಗೆ ಬನ್ನಿ ಎಂದರು. ಇದರ ಅರ್ಥ ಏನು? ಇದು ರಾಜ್ಯಾಂಗದ ವ್ಯಾಪ್ತಿಯಲ್ಲಿ ಬರತಕ್ಕ ವಿಚಾರ. ಇಂತಹ ಪರಿಸ್ಥಿತಿಯಲ್ಲಿ ಅವರು ಹಾಗೆ ಹೇಳಿದರೆ ಅದು ಬೇಡ ಎಂದು ಅರ್ಥ ತಾನೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಆ ರೀತಿ ಬೇಡ ಎಂದು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಆದರೆ ನಾನು ಹಾಗೆ ನೀವು ಹೇಳಿದ್ದನ್ನು ಕೇಳಿಸಿಕೊಂಡಂತೆ ಇತ್ತು. ಅವೆಲ್ಲಾ ಬಿಟ್ಟು ಸಂತಾಪ ಸೂಚಕ ನಿರ್ಣಯಕ್ಕೆ ಬನ್ನಿ ಎಂದರೆ ಅರ್ಥ ಏನು? ಇದಕ್ಕಿಂತ ಬಹಳ ಮುಖ್ಯವಾದ ವಿಚಾರ ಇದೆ, ಅದನ್ನು ತೆಗೆದುಕೊಳ್ಳಿ ಎಂದರೆ ಅರ್ಥ ಏನು? ಇದು ಬೇಡ ಎಂದು ತಾನೇ ಅರ್ಥ ಆಗುತ್ತದೆ? ಇದು ಹೊಸ ಸಂಪ್ರದಾಯಕ್ಕೆ ನಾಂದಿ ಆಗುತ್ತದೆ ಅಲ್ಲವೇ? ಅವರು ವಿರೋಧ ಪಕ್ಷದಲ್ಲಿದ್ದು ಬಹಳ ವರ್ಷಗಳಿಂದ ಕೆಲಸ ಮಾಡಿ ಅನುಭವ ಹೊಂದಿರುವವರು. ಅವರು ಈ ರೀತಿ ಹೇಳಬೇಕಾದ ಅಗತ್ಯ ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನೂ ಆ ರೀತಿಯಾಗಿ ಹೇಳಿಲ್ಲ.

ಶ್ರೀ ಸಿದ್ಧರಾಮಯ್ಯ : ಹೇಳದೇ ಇದ್ದರೆ ಆ ವಿಚಾರ ಬಿಡಿ. ಇದೇ ವಿಚಾರದಲ್ಲಿ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ರೂಲಿಂಗ್ ಕೊಟ್ಟಿದ್ದಾರೆ. ದಾಖಲೆಗಳು ಇವೆ. ವಿಧಾನಸಭೆಗೆ ಸರ್ವೋಚ್ಚ ಅಧಿಕಾರ ಇರತಕ್ಕದ್ದು ಎಂದು ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ರೂಲಿಂಗ್ ಕೊಟ್ಟಿರತಕ್ಕದ್ದು ಇದೆ.

Sri G.V. Sreeramareddy : The Governor has been reprimanded by the House.

ಶ್ರೀ ಸಿದ್ದರಾಮಯ್ಯ : ಮಾನ್ಯ ರಾಜ್ಯಪಾಲರ ಬಗ್ಗೆ ನಮಗೆ ಬಹಳ ಗೌರವ ಇದೆ. ಅವರೂ ಕೂಡ ಇದನ್ನು ಏಕೆ ಮಾಡಿದ್ದಾರೋ ಗೊತ್ತಿಲ್ಲ. ಅವರು ಯಾವ ಕಾರಣಕ್ಕಾಗಿ ಬಂದಿದ್ದರೋ ಗೊತ್ತಿಲ್ಲ. ಅವರಾಗಿಯೇ ಅವರು ಹೊರಟು ಹೋಗಿದ್ದರೆ ಬಹಳ ಸಂತೋಷ. ಅವರು ಹೋಗಿರದಿದ್ದರೆ ತಾವು ಹೇಳಬೇಕಾಗುತ್ತದೆ. ಅವರು ಗ್ಯಾಲರಿಯಲ್ಲಿ ಕೂಡ ಕುಳಿತುಕೊಳ್ಳಬಾರದು. ಅವರೇನು ಅಬ್ಸರ್‌ವರ್ ಆಗಿ ಬಂದಿದ್ದಾರಾ? ನಿಮ್ಮ ಮೇಲೆ ಅನುಮಾನಕ್ಕೆ ಆಸ್ಪದ ಆಗಬಹುದು. ನಿಮ್ಮ ಮೇಲೆ ವಾರ್ಡ್ ಅಂಡ್ ವಾಚ್? ನಿಮ್ಮ ಮೇಲೆ ವಾರ್ಡ್ ಅಂಡ್ ವಾಚ್ ಮಾಡಲು ಅವರಿಗೆ ಯಾವುದೇ ಅಧಿಕಾರ ಇಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಈಗೇನು ಸಂಪ್ರದಾಯ ಇದೆ, ಅದನ್ನು ಉಳಿಸಿಕೊಳ್ಳಬೇಕಾಗಿದ್ದು ಬಹಳ ಮುಖ್ಯವಾದಂತಹದು, ಆ ಕೆಲಸವನ್ನು ತಾವು ದಯಮಾಡಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನನಗೂ ಮಾತನಾಡಲು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳುತ್ತಿದ್ದಾರೋ ಕೇಳೋಣ. ಮಾನ್ಯ ರಾಜ್ಯಪಾಲರ ಪ್ರತಿನಿಧಿಗಳು ಹೊರಟು ಹೋದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೊರಟು ಹೋಗಿರುವ ವಿಚಾರ ಈ ಸದನಕ್ಕೆ ಗೊತ್ತಾಗಬೇಕು.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ (ಸಂಸದೀಯ ವ್ಯವಹಾರಗಳು ಹಾಗೂ ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಅವರು ಮಾನ್ಯ ಶ್ರೀರಾಮರೆಡ್ಡಿಯವರು, ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ತಾವು ರೂಲಿಂಗ್ ಕೊಡುವ ಮೊದಲು ಬಹಳ ಗಂಭೀರವಾದ ವಿಚಾರವನ್ನು ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇಂತಹ ಗಂಭೀರವಾಗಿರತಕ್ಕಂಥ ವಿಚಾರ ಪ್ರಸ್ತಾಪವಾದ ನಂತರ ಇಷ್ಟೆಲ್ಲಾ ಚರ್ಚೆಯನ್ನು ಸನ್ಮಾನ್ಯ ಸಿದ್ದರಾಮಯ್ಯನವರು, ಸನ್ಮಾನ್ಯ ಯಡಿಯೂರಪ್ಪನವರು, ಸನ್ಮಾನ್ಯ ರಮೇಶ್‌ಕುಮಾರ್‌ರವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ರಾಜೇಂದ್ರನ್‌ರವರು, ಹಾಗೂ ಜಯಪ್ರಕಾಶ್ ಹೆಗ್ಡೆಯವರು ಮಾಡಿ, ಒತ್ತಾಯ ಮಾಡಿದ ನಂತರ ಸಹಜವಾಗಿಯೇ ಕೇವು ಸ್ನೇಹಿತರು 'ಎದ್ದು ಹೋದರು, ಎದ್ದು ಹೋದರು' ಎಂದು ಹೇಳಿದರು. ಇಲ್ಲಿ ಪ್ರಶ್ನೆ ಬಂದಿರುವುದು ಒಬ್ಬ ವ್ಯಕ್ತಿಯಲ್ಲ. ಪ್ರಶ್ನೆಯೇನೆಂದರೆ, ತತ್ವ ಸಿದ್ಧಾಂತ. ಅವರು ಇಲ್ಲಿಗೆ ಬರುವುದಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರಾ? ಗವರ್ನರ್ ಕಛೇರಿಯಿಂದ ಬಂದಿರುವ ಅಬ್ಸರ್ವರ್ಸ್‌ಗೆ ತಾವು ಒಪ್ಪಿಗೆ ಕೊಟ್ಟಿದ್ದರೆ ನಾವು ಅವರನ್ನು ಹಾಗೆಯೇ ಹಗುರವಾಗಿ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಈ ಸದನದ ಎಲ್ಲಾ ನಾಯಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ತಾವು ಪರವಾನಗಿ ಕೊಟ್ಟಿದ್ದರೆ, ಅಥವಾ ಆ ಪರವಾನಗಿಯನ್ನು ವಾಪಸ್ಸು ಪಡೆಯಬೇಕಾದರೂ ಸಹ 'ರಾಜ್ಯಪಾಲರೆ, ಇದು ನಮ್ಮ ನಿಲುವಾಗಿದೆ. ನಾನು ಅಬ್ಸರ್ವರ್ಸ್ ಅನ್ನು ಒಪ್ಪುವುದಿಲ್ಲ' ಎಂಬ ಮಾತನ್ನು ತಾವು ಅವರಿಗೆ ತಿಳಿಸಬೇಕು. 'ಈ ಸದನದ ಅಭಿಪ್ರಾಯ ಹೀಗಿದೆ' ಎಂದು ಅವರಿಗೆ ತಿಳಿಸಬೇಕು. ಈಗಾಗಲೇ ಕೋರ್ಟಿನ ಜಡ್ಜ್‌ಮೆಂಟ್ ಬಂದಿದ್ದನ್ನು ಅವರು ಹೇಳಿದರು. ಗವರ್ನರ್ ಅನ್ನು ರಿಪ್ರಿಮ್ಯಾಂಡ್ ಮಾಡಿ.....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ರಿಪ್ರಿಮ್ಯಾಂಡ್ ಅಷ್ಟೇ ಅಲ್ಲ. He was recalled.

Sri H.K. Patil : He was recalled ಅನ್ನುವುದನ್ನು ಪ್ರಸ್ತಾಪ ಮಾಡಿದರು. ಇಷ್ಟೆಲ್ಲಾ ದೊಡ್ಡ ದೊಡ್ಡ ಘಟನೆಗಳು ನಡೆದಂಥ ಸಂದರ್ಭದಲ್ಲಿ ಗವರ್ನರ್ ಕಚೇರಿಯಿಂದ ಅಬ್ಸರ್ವರ್ ಬಂದಿದ್ದಾರೆ. ಅವರನ್ನು ಕಳುಹಿಸಬಾರದು. ಇದು ನಮ್ಮ ಮನೆಯ ಖಾಸಗಿ ಕೆಲಸ ಅಲ್ಲ. ಇದು ರಾಷ್ಟ್ರದ ಪ್ರಜಾಸತ್ತಾತ್ಮಕ ವ್ಯವಸ್ಥೆಯೊಳಗೆ, ಸಂಸದೀಯ ವ್ಯವಹಾರದೊಳಗೆ ತಾವು ಕೊಡುವ ರೂಲಿಂಗ್ ಒಂದು ದೊಡ್ಡ ಮೈಲಿಗಲ್ಲಾಗುತ್ತದೆ. ಅದು ಎಲ್ಲರನ್ನು ಆಕರ್ಷಿಸುವಂತಹ ರೂಲಿಂಗ್ ಆಗಬೇಕಾಗುತ್ತದೆ. ಈ ಸದನದಲ್ಲಿ ಈ ರೀತಿಯಾಗಿರುವ ಅಭಿಪ್ರಾಯ ಬಂತು. 50 ವರ್ಷಗಳ ನಂತರ ಕರ್ನಾಟಕ ವಿಧಾನಸಭೆಯ ಈ ರೂಲಿಂಗ್ ಅನ್ನು, ಈ ವಿಚಾರವನ್ನು, ಈ ಠರಾವನ್ನು ಜನರು ನೋಡುವಂಥ ಸಂದರ್ಭ ಇದಾಗಿರುವುದರಿಂದ ಇವೊತ್ತು ಯಾವುದೇ ರೀತಿಯಾಗಿರುವ ಅಧಿವೇಶನ ಇದಲ್ಲ. ಸಾಕಷ್ಟು ರಾಜಕೀಯ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ನಾವು ಸೇರಿರುತ್ತೇವೆ. ಇಂತಹ ಒಂದು ಗಂಭೀರವಾಗಿರುವ ಮಹತ್ವದ ಸಭೆಯಲ್ಲಿ ಮಾನ್ಯ ರಾಜ್ಯಪಾಲರ ಕಚೇರಿಯಿಂದ ಅಬ್ಸರ್ವರ್ಸ್ ಅನ್ನು, ವೀಕ್ಷಕರನ್ನು ನಾವು ಒಳಗೆ ಬರವಾಡಿಕೊಳ್ಳಬಹುದೇ ಅಥವಾ ಬರಮಾಡಿಕೊಳ್ಳಬಾರದೇ? ನಾವು ಬಂದವರನ್ನು ಹಾಗೇ ಕಳುಹಿಸಬೇಕೇ? ಈ ದೊಡ್ಡ ಸ್ಥಾನದಲ್ಲಿರುವ

ಸನ್ಮಾನ್ಯ ರಾಜ್ಯಪಾಲರನ್ನು ರಾಜ್ಯಪಾಲರು ಕಳುಹಿಸಿರುವ ವೀಕ್ಷಕರನ್ನು ನಾವು ಹಾಗೇ ಕಳುಹಿಸುವುದು ಸೂಕ್ತವಾಗುವುದಿಲ್ಲ. ಇದು ಅತ್ಯಂತ ಸೂಕ್ಷ್ಮವಾಗಿರುವ ವಿಚಾರ, ಗಂಭೀರವಾಗಿರತಕ್ಕಂಥಾದ್ದು, ಮಹತ್ವವಾದುದು. ಆದುದರಿಂದ, ತಾವು ಇದನ್ನು ಇಷ್ಟು ಲಘುವಾಗಿ ಪರಿಗಣಿಸಕೂಡದು. ಎಲ್ಲರನ್ನೂ ಕರೆದು ಕೇಳಿ. ಬಹುತೇಕ ಈಗಾಗಲೇ ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ತಾವು ಮಾನ್ಯ ರಾಜ್ಯಪಾಲರ ಜೊತೆ ಮಾತನಾಡಿ ಅದನ್ನು ನೀವು ಅವರಿಗೆ ಕಮ್ಯುನಿಕೇಟ್ ಮಾಡಬೇಕು. ಮಾನ್ಯ ರಾಜ್ಯಪಾಲರ ಸ್ಥಾನಮಾನಕ್ಕೆ ಅವರು ಕಳುಹಿಸಿರುವ ನಿರೀಕ್ಷಕರನ್ನು ಹೊರಗೆ ಕಳುಹಿಸಿದರೆಂದು ಆಗಬಾರದು. ಆ ದಿಶೆಯಲ್ಲಿ ತಾವು ಅತ್ಯಂತ ಗಂಭೀರವಾಗಿ ಇದನ್ನು ಪರಿಗಣಿಸಿ ಅವರ ಜೊತೆ ಮಾತನಾಡಿ ಅಭಿಪ್ರಾ ಿ ಹೀಗೆ ಇರುವ ಹಿನ್ನೆಲೆಯಲ್ಲಿ ತಾವು ಅವರನ್ನು ವಾಪಸ್ಸು ಕಳುಹಿಸುವುದರ ಬಗ್ಗೆ ನಿರ್ಣಯಿಸಬೇಕೇ ಹೊರತು ಅವರು ಹೋಗಿದ್ದಾರೆ, ಇಲ್ಲಿ ಮುಗಿಯಿತು ಎಂದು ಆಗಬಾರದು. ಆದುದರಿಂದ, ತಮ್ಮಿಂದ ವಿಶೇಷವಾದ ರೂಲಿಂಗ್ ಅನ್ನು ನಾವು ಅಪೇಕ್ಷಿಸುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲ ಸಂಪನ್ಮೂಲ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮೆಲ್ಲ ಹಿರಿಯ ನಾಯಕರು ಮಾತನಾಡಿದ್ದಾರೆ ಮತ್ತು ಮಾಜಿ ಸ್ಪೀಕರ್ ಅವರಾದ ಶ್ರೀ ರಮೇಶ್‌ಕುಮಾರ್ ಅವರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಪ್ರಶ್ನೆಯೇನೆಂದರೆ, ಅಬ್ಜೆಕ್ಷನ್ ತೆಗೆದುಕೊಂಡ ತಕ್ಷಣ ಈ ಸದನದಿಂದ ಹೊರಗಡೆ ಹೋದರೆ ಅಷ್ಟಕ್ಕೇ ನಿಲ್ಲುವುದಿಲ್ಲ. ಕಾರಣವೇನೆಂದರೆ.....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಟೈಮ್ ಏನೂ ಇಲ್ಲ. ನಿಮಗೆ ಟೈಮ್ ಕೊಡುತ್ತೇವೆ. ಆತುರ ಏಕೆ? ಸಮಯ ಬಂದನಂತರ ಹೋಗುವುದಕ್ಕೆ ನೋಡೋಣ. ಸ್ವಲ್ಪ ವಿಧಾನ ಇರಲಿ. ಅದಕ್ಕೋಸ್ಕರ, ಇವೊತ್ತಿನ ದಿವಸ ಪ್ರಶ್ನೆ ಇರುವುದು ಗವರ್ನರ್‌ರವರು ಅಬ್ಸರ್ವರ್ ಅವರನ್ನು ಕಳುಹಿಸಿದ್ದಾರೆಂಬ ಮಾತು ಇಲ್ಲಿ ಪ್ರಸ್ತಾಪವಾಗಿದೆ. ಗವರ್ನರ್ ಅಬ್ಸರ್ವರ್ ಅನ್ನು ಏಕೆ ಕಳುಹಿಸಿದರು? ಈ ಸದನದ ಸುಪ್ರೀಂ ಅಥಾರಿಟಿ ಈ ಮನೆಯಲ್ಲಿ ಮತ್ತು ಈ ಮೊಗಸಾಲೆಯಲ್ಲಿ ತಾವಾಗಿದ್ದೀರಿ. ಈ ಭಾಗದಲ್ಲಿ ಆಗತಕ್ಕಂಥ ಯಾವುದೇ ಚಟುವಟಿಕೆಗಳು ನಿಮ್ಮ ಗಮನಕ್ಕೆ ಬಾರದೇ ಮಾಡತಕ್ಕಂಥಾದ್ದು ಅಲ್ಲವೆಂದು ನಮ್ಮ ರೂಲ್ಸ್ ಪುಸ್ತಕದಲ್ಲಿದೆ. ಅಂದಾಗ ಗವರ್ನರ್ ಆಫೀಸಿನಿಂದ ಅಧಿಕಾರಿಗಳು ಇಲ್ಲಿಗೆ ಹೇಗೆ ಬಂದರು? ಅವರು ಪಾಸ್ ತೆಗೆದುಕೊಳ್ಳಬೇಕಾದರೂ ಕೂಡ ಯಾವ ಪರ್ಪಸ್‌ಗಾಗಿ ಬಂದಿದ್ದಾರೆಂಬುದನ್ನು ನಮೂದಿಸಬೇಕಾಗುತ್ತದೆ. ಅವರು ಯಾವ ಉದ್ದೇಶಕ್ಕಾಗಿ ಬಂದರು? ನಿಮ್ಮ ಪರ್ಮಿಶನ್ ತೆಗೆದುಕೊಂಡರೇ ಅಥವಾ ಅವರು ಪರ್ಮಿಶನ್ ತೆಗೆದುಕೊಂಡು ಇಲ್ಲಿಗೆ ಬಂದು ನಂತರ ಅವರು ಇಲ್ಲಿಂದ ಏಕೆ ನಿರ್ಗಮಿಸಿದರು? ಈ ಪ್ರಶ್ನೆಗಳು ಉದ್ಭವಿಸುತ್ತವೆ. ಸುಮ್ಮನೆ ಬಂದು ಸುಮ್ಮನೆ ಹೋದರು ಎಂದರೆ, ನೀವು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಅವರು ಇಲ್ಲಿಗೆ ಪರ್ಮಿಶನ್ ತೆಗೆದುಕೊಂಡು ಬಂದಿದ್ದರೆ, ಯಾವ ಕಾನೂನಿನ ಯಾವ ಕಾನೂನಿನಲ್ಲಿ ಚೌಕಟ್ಟಿನಲ್ಲಿ ಅವರು ಕಳುಹಿಸಿದ್ದಾರೆಂಬ ಪ್ರಶ್ನೆ ಕೂಡ ಬರುತ್ತದೆ. ನಾವು ಅವರಿಗೆ ಅವಮಾನ ಮಾಡುವ ದೃಷ್ಟಿಯಿಂದ ಈ ಪ್ರಶ್ನೆ ಎತ್ತಿಲ್ಲ ಅಥವಾ ಇದನ್ನು ಪದೇ ಪದೇ ಹೇಳಿ ಚಿಕ್ಕ ಪ್ರಶ್ನೆ ಎತ್ತಿ ಪದೇ ಪದೇ ಅವರ ಹೆಸರನ್ನು ಹೇಳುತ್ತೇವೆ ಎನ್ನುವ ಭಾವನೆಯಿಂದ ದಯವಿಟ್ಟು ಯಾರೂ ಕೂಡ

ತೆಗೆದುಕೊಳ್ಳಬಾರದು. ನಮ್ಮ ಕರ್ನಾಟಕದ ಗವರ್ನರ್ ಅವರಿಗೆ ಹೆಚ್ಚಿನ ಮರ್ಯಾದೆಯನ್ನು ನಮ್ಮ ಶಾಸಕರು ಕೊಡುತ್ತಾ ಬಂದಿದ್ದಾರೆ. ಸದನ ಕೊಟ್ಟಿದೆ ಮತ್ತು ನಾವೂ ಕೂಡ ವೈಯಕ್ತಿಕವಾಗಿ ಗೌರವಿಸುತ್ತೇವೆ. ಅವರು ಕಾನೂನಿನ ಚೌಕಟ್ಟಿನಲ್ಲಿ ಗವರ್ನರ್‌ರವರು ಇಲ್ಲಿಯವರೆಗೆ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆದರೆ, ಇವೊತ್ತು ಏಕೆ ಈ ಸಂಶಯ ಈ ಸದನದ ಮೇಲೆ ಅವರಿಗೆ ಬಂತು ಅಥವಾ ತಮ್ಮ ಮೇಲೇನಾದರೂ ಅವರಿಗೆ ಸಂಶಯ ಇದೆಯೇ ಅಥವಾ ಕಾನೂನು ಬಿಟ್ಟು ಏನಾದರೂ ನಡೆದುಕೊಳ್ಳುತ್ತಿದ್ದೇವೆಯೇ ಎನ್ನುವ ಸಂಶಯದಿಂದ ಅವರು ಕಳುಹಿಸಿದ್ದಾರೆಯೇ? ಈ ಪ್ರಶ್ನೆಗಳು ಉದ್ಭವಿಸುತ್ತವೆ. ಇದರಿಂದ ನಮ್ಮ ಘನತೆಗೆ ಚ್ಯುತಿ ಬಂದಂತಾಗಿದೆ. ಈಗಾಗಲೇ ನಮ್ಮ ಶ್ರೀರಾಮರೆಡ್ಡಿಯವರು ಹೇಳಿದರು. ನಮ್ಮ ಉತ್ತರಪ್ರದೇಶದಲ್ಲಿ ಇದೇ ರೀತಿ ಒಂದು ಘಟನೆ ನಡೆದಾಗ ಯಾವ ರೀತಿಯಾಗಿ ಅಲ್ಲಿನ ಗವರ್ನರ್ ಅವರನ್ನು ಕೇಂದ್ರ ಸರ್ಕಾರದವರು ವಾಪಸ್ಸು ಕರೆಸಿಕೊಂಡರು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದೆಲ್ಲವೂ ಕೂಡ ಗೊತ್ತಿದ್ದರೂ ಏಕೆ ಕಳುಹಿಸಿದರು? ಇದು ಗೊತ್ತಿಲ್ಲವೆನ್ನುವ ಪ್ರಶ್ನೆಯಲ್ಲ, ಗೊತ್ತಿದ್ದೂ ಕೂಡ ಕಳುಹಿಸಬೇಕಾದರೆ ಏನೋ ಒಂದು ಉದ್ದೇಶ ಇದೆ. ನಮ್ಮಲ್ಲಿ ಏನೋ ನ್ಯೂನತೆಗಳಿವೆ, ಅದನ್ನು ಕಂಡುಹಿಡಿಯುವುದಕ್ಕೆ ಅಥವಾ ನಮ್ಮ ಮೇಲೆ ನಮ್ಮ ಬಗ್ಗೆ ಏನೋ ಒಂದು ಸಂಶಯ ಅವರಲ್ಲಿ ಮೂಡಿದೆ ಎನ್ನುವ ಅರ್ಥ ಇಲ್ಲಿ ಬರುತ್ತದೆ. ಅದಕ್ಕೋಸ್ಕರ, ದಯವಿಟ್ಟು ಯಾವ ಉದ್ದೇಶಕ್ಕಾಗಿ ಬಂದಿದ್ದರು? ಮತ್ತು ಏಕೆ ಹೋದರು? ಇದನ್ನು ನೀವು ಹೇಳುವುದಕ್ಕಿಂತ ಮುಂಚೆ ಹೋದರು, ಅವರು ಏಕೆ ಹೋದರು? ಮತ್ತು ಅವರನ್ನು ಯಾರು ಕಳುಹಿಸಿದರು? ಇದೆಲ್ಲವನ್ನೂ ಸ್ಪಷ್ಟಪಡಿಸಬೇಕು. ಮತ್ತು ಈ ರೀತಿಯಾಗಿ ನಾನೆಂದೂ ನೋಡಿಲ್ಲ. ಇದು 35ನೇ ವರ್ಷ ನಡೆಯುತ್ತಿದೆ. 10ನೇ ಜನವರಿ 34 ವರ್ಷ ಮುಗಿಯುತ್ತದೆ. ನಾನು ಮತ್ತು ಶ್ರೀಮಾನ್ ಧರ್ಮಸಿಂಗ್ ಸಾಹೇಬರು ಈ ಸದನದಲ್ಲಿ ಅಂದಿನಿಂದಲೂ ಸತತವಾಗಿ ಸದಸ್ಯರಾಗಿದ್ದೇವೆ. ಯಾವುದೇ ಕಾನ್‌ಫಿಡೆನ್ಸ್ ಮೋಷನ್‌ನಲ್ಲಾಗಲಿ, ಅಥವಾ ನೊ ಕಾನ್‌ಫಿಡೆನ್ಸ್ ಮೋಷನ್ ತಂದಾಗ ಗವರ್ನರ್ ಅವರಿಂದ ಅಬ್ಸರ್ವರ್ ಅನ್ನು ಅಪಾಯಿಂಟ್ ಮಾಡಿಲ್ಲ. ಅಥವಾ ಬಂದು ನಿಮಗೆ ಇಂಟಿಮೇಷನ್ ಕೊಡದಿದ್ದರೂ ಅವರು ಕಳುಹಿಸಿಲ್ಲ. ಇವೊತ್ತು ಏನಾಗುತ್ತದೆಂದರೆ, ನಮಗೂ ಕೂಡ ಸಂಶಯ ಬರುತ್ತದೆ. ಇಲ್ಲಿ ನಿಮಗೆ ಇಂಟಿಮೇಟ್ ಮಾಡಿ ಅವರನ್ನು ಕಳುಹಿಸಿರಬೇಕು. ಇಲ್ಲವೆಂದರೆ, *suo moto* ಅವರೇ ಬರಬೇಕಾದರೆ ಯಾವ ಉದ್ದೇಶಕ್ಕಾಗಿ ಬಂದಿದ್ದಾರೆಂದು, ಅವರ ಆಫೀಸ್ ಬಿಟ್ಟು ಇಲ್ಲಿಗೆ ಬರಬೇಕಾದರೆ ಉದ್ದೇಶವೇನು? ನೀವು ಹೋಗಿ, ನೀವು ಆಫೀಸಿನಲ್ಲಿ ಕುಳಿತುಕೊಳ್ಳುವ ಅವಶ್ಯಕತೆಯಿಲ್ಲ, ನಿಮಗೆ ಇಲ್ಲಿ ಕೆಲಸವಿಲ್ಲವೆಂದು ಅವರನ್ನು ಗವರ್ನರ್ ಇಲ್ಲಿಗೆ ಕಳುಹಿಸಿದರೇ? ಅದಕ್ಕೋಸ್ಕರ. ಇದರ ಬಗ್ಗೆ ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ನಿಮ್ಮ ನಿರ್ಣಯವನ್ನು ಕೊಡತಕ್ಕಂಥಾದ್ದರ ಮೇಲೆ, ತಾವು ಏನು ನಿರ್ಣಯ ಕೊಡುತ್ತೀರಿ, ಅದಕ್ಕಿಂತಲೂ ಮತ್ತು ರೂಲಿಂಗ್ ಕೊಡುವುದಕ್ಕಿಂತ ಮುಂಚೆ ಇದರ ಬಗ್ಗೆ ಸವಿಸ್ತಾರವಾಗಿ ತಿಳಿದುಕೊಂಡು ಮತ್ತು ಸಂಬಂಧಪಟ್ಟವರಿಗೂ ಕೂಡ ತಾವು ಸ್ಪಷ್ಟವಾದ ಶಬ್ದಗಳಿಗೆ ಹೇಳಬೇಕಾಗುತ್ತದೆ. ಈ ರೀತಿಯಾಗಿ ಮುಂದೆಂದೂ ಆಗಬಾರದು ಮತ್ತು ನಡೆಯತಕ್ಕಂಥ ಈ ಪದ್ಧತಿಯನ್ನು ಅವರು ಅನುಸರಿಸಿದರೆ ಮುಂದಿನ ಪೀಳಿಗೆಯನ್ನು ನಾವು ಒಂದು ತಪ್ಪುದಾರಿಗೆಳೆಯುತ್ತಿದ್ದೇವೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾತನಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾತನಾಡುವುದಕ್ಕೆ ವಿಷಯಗಳು ಬೇಕಾದಷ್ಟಿವೆ. ಆದರೆ, ಇವೊತ್ತು ಮಾತನಾಡುವುದಕ್ಕೆ ಇರುವ ವಿಷಯ ಇದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಸುಮಾರು 1967ರಿಂದ ಈ ಸದನದಲ್ಲಿ ಸದಸ್ಯನಾಗಿದ್ದೇನೆ. ಇಂಥ ಪರಿಸ್ಥಿತಿ ಎಂದೂ ಉದ್ಭವವಾಗಿರಲಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಅಬ್ಜೆಕ್ಷನ್ ಮಾಡುವುದು ಸರಿಯಲ್ಲ. ಚರ್ಚೆ ಮಾಡುವುದನ್ನು ತಡೆಗಟ್ಟುವುದು ಸರಿಯಲ್ಲ.

ಅಧ್ಯಕ್ಷರು : ಹೇಳುವುದನ್ನು ಒಂದು ನಿಮಿಷದಲ್ಲಿ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಗಲಾಟೆ ಮಾಡಿದರೆ ಹೇಗೆ ಸಾಧ್ಯ? ಹಾಗಾದರೆ ಸದಸ್ಯರ ಅಭಿಪ್ರಾಯವನ್ನು ಹೇಳಬಾರದೆ?

(ಗೊಂದಲ)

ಗಂಭೀರವಾದ ವಿಚಾರ, ಈ ಸದನದ ಗೌರವದ ಪ್ರಶ್ನೆ. ಅದರ ಬಗ್ಗೆ ಮಾತನಾಡಬಾರದು ಎಂದರೆ ಹೇಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾತನಾಡಬಾರದು ಎಂದರೆ ಸದನವನ್ನು ಮುಂದೂಡಿ.

ಶ್ರೀ ಎಸ್. ರಾಜೇಂದ್ರನ್ : ನಾವೆಲ್ಲರೂ ಮಾತನಾಡಲೇ ಬಂದಿರುವುದು.

ಶ್ರೀ ವಾಟಾಳ್ ನಾಗರಾಜ್ : ಏನಿದು ಹುಡುಗಾಟ ಇವತ್ತು?

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಜ್ಯಪಾಲರ ಕಛೇರಿಯ ಅಧಿಕಾರಿಗಳು ನಿರ್ಗಮಿಸಿದ್ದಾರೆ. ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದೀರಿ. ಇವೆಲ್ಲವನ್ನೂ ನಾನು ನೋಡಿ ರೂಲಿಂಗ್‌ನ್ನು ಕೊಡುತ್ತೇನೆ. ಅವರು ನಿರ್ಗಮಿಸಿರುವುದರಿಂದ ಈಗ ನಮ್ಮ ಸಂತಾಪ ಸೂಚನೆ ಏನಿದೆ ಅದನ್ನು ತೆಗೆದುಕೊಳ್ಳೋಣ ದಯವಿಟ್ಟು ಸಹಕರಿಸಿ.

ಶ್ರೀ ಆರ್.ವಿ. ದೇಶಪಾಂಡೆ : ಇದು ಸದನದ ಗೌರವದ ಪ್ರಶ್ನೆ.

Sri G.V. Sriramareddy : Who asked them to sit here? Who permitted them to sit here?

(ಗೊಂದಲ)

Mr. Speaker : I will give ruling. ಈಗ ಸಬ್ಜೆಕ್ಟ್‌ಗೆ ಹೋಗೋಣ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ನಾನು 1967ನೇ ಇಸವಿಯಿಂದ ಇಲ್ಲಿದ್ದೇನೆ. ಆದರೆ ಎಂದೂ ಇಂಥ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ಈ ಸದನದ ಸರ್ವೋಚ್ಚ ತಾವು ಈ ಸದನದ ಅಧ್ಯಕ್ಷರಾಗಿರುವಾಗ ನಿಮ್ಮ ಮಾತುಗಳು ಸಂಪೂರ್ಣ, ನಿಮ್ಮ ನಡವಳಿಕೆ, ಈ ಸದನವನ್ನು

ನಡೆಸಿಕೊಂಡು ಹೋಗತಕ್ಕದ್ದು ತಮಗೆ ಸೇರಿದ್ದು. ಈ ಸದನವನ್ನು ನಡೆಸತಕ್ಕ ಅಧಿಕಾರ ಮಾನ್ಯ ರಾಜ್ಯಪಾಲರಿಗಿಲ್ಲ. ಮಾನ್ಯ ರಾಜ್ಯಪಾಲರಿಗೆ ಕಿಂಚಿತ್ತೂ ಈ ಸದನವನ್ನು ನಡೆಸತಕ್ಕ ಅಧಿಕಾರವಿಲ್ಲ. ಅಲ್ಲಿ ಮೇಲುಗಡೆ ರಾಜ್ಯಪಾಲರು ಮತ್ತು ಅವರ ಕಡೆಯವರು ಯಾರಾದರೂ ಬಂದರೆ ಕುಳಿತುಕೊಳ್ಳಲು ಎಂದು ಸ್ಥಳವನ್ನು ಗೊತ್ತು ಮಾಡಿದ್ದರು, ಆದರೆ ಹಿಂದೆ ಇದ್ದಂಥ ಅಧ್ಯಕ್ಷರು ಅಲ್ಲೂ ಅವರು ಕುಳಿತುಕೊಳ್ಳಲು ಸಾಧ್ಯವಿಲ್ಲವೆಂದು ಆ ಜಾಗದಲ್ಲಿ ಮಹಾತ್ಮಾಗಾಂಧಿಯವರ ಫೋಟೋವನ್ನು ಹಾಕಿ ಅಲ್ಲೂ ಯಾರು ಬರಬಾರದು ಎಂದು ಈ ಸದನದ ಘನತೆಯನ್ನು ಎತ್ತಿಹಿಡಿದಿದ್ದಾರೆ. ಈಗ ಅವರು ಹೊರಗಡೆ ಹೋದರು ಎಂದಾಕ್ಷಣ ಸಮಸ್ಯೆ ಬಗೆಹರಿಯಲಿಲ್ಲ. ತಾವೂ ಮೂರ್ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕು. ಅವರು ಏಕೆ ಬಂದರು? ಏಕೆ ಹೋದರು? ನಿಮ್ಮನ್ನು ಅವರು ಕೇಳಿದರೆ? ಮಾನ್ಯ ರಾಜ್ಯಪಾಲರು ತಮ್ಮ ಹತ್ತಿರ ಮಾತನಾಡಿದ್ದರೆ? ಮಾನ್ಯ ರಾಜ್ಯಪಾಲರು ತಮಗೆ ಪತ್ರವನ್ನು ಬರೆದು ಕೇಳಿದ್ದರೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ನೀಡಿದ್ದೀರಿ, ಆದ್ದರಿಂದ ಮುಂದಿನ ವಿಷಯವನ್ನು ಎತ್ತಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಇಲ್ಲಿ ಯಾರೂ ಸಹ ಅಬ್‌ಸರ್ವರ್ ಆಗಿ ಬಂದಿಲ್ಲ. ಅವರು ಅಧಿಕಾರಿಗಳು ಬಂದಿದ್ದಾರೆ, ಹೋಗಿದ್ದಾರೆ. ಅದನ್ನೇ ದೊಡ್ಡದು ಮಾಡಿಕೊಳ್ಳಬೇಡಿ, ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದೀರಿ. ಅದೆಲ್ಲವನ್ನು ನೋಡಿ ನಾನು ಒಂದು ರೂಲಿಂಗ್ ಕೊಡುತ್ತೇನೆ. ದಯಮಾಡಿ ತಾವೆಲ್ಲರು ಕುಳಿತುಕೊಂಡರೆ.....

ಶ್ರೀ ಆರ್.ವಿ. ದೇಶಪಾಂಡೆ : ಇದು ಪ್ರಜಾಪ್ರಭುತ್ವದ ಪದ್ಧತಿ. ಆದ್ದರಿಂದ ಇದರ ಮೇಲೆ ನಿರ್ಣಯವಾಗಬೇಕಾಗುತ್ತದೆ. ಆ ನಿರ್ಣಯದ ನಂತರ ಮುಂದೆ ಹೋಗಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಅಧ್ಯಕ್ಷರೆ, ತಾವೇನು ರೂಲಿಂಗ್ ಕೊಡುತ್ತೀರಿ ಅದನ್ನು ನಮಗೆ ತಿಳಿಸಿ, ಅನಂತರ ನಮಗೆ ಬೇರೆಯದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. You must know whether the observer has gone out ಅಥವಾ ಒಳಗಡೆ ಇದ್ದಾರೆಯೇ? ಯಾವ ಕಾರಣದಿಂದ ಅವರು ತಮ್ಮನ್ನು ಮಾನೀಟರ್ ಮಾಡಬೇಕು? ನಾವೆಲ್ಲಾ ತಮ್ಮ ಮೇಲೆ ಅಪಾರ ನಂಬಿಕೆಯನ್ನು ಪ್ರೀತಿಯನ್ನು ಇಟ್ಟುಕೊಂಡಿರುವವರು. ತಾವು ಆ ಪೀಠದಲ್ಲಿ ಕುಳಿತುಕೊಂಡು ನೀವು ಕೊಡುವ ರೂಲಿಂಗ್‌ಗೆ ಕೂರಿ ಎಂದರೆ ಕೂರುತ್ತೇವೆ, ಎದ್ದೇಳಿ ಎಂದರೆ ಎದ್ದೇಳುತ್ತೇವೆ. ಆ ರೀತಿ ಇರುವಾಗ ತಮ್ಮನ್ನು ಪ್ರಶ್ನೆ ಮಾಡುವುದೆಂದರೆ ನಮಗೆ ನೋವಾಗಿದೆ, ಆ ನೋವು ತಮಗೆ ಬೇಕು ಎಂದರೆ ತೆಗೆದುಕೊಳ್ಳಿ. ಆದರೆ ನಮಗೆಲ್ಲಾ ನೋವಾಗುತ್ತದೆ. ಆದ್ದರಿಂದ ಅದು ಬೇಡ, ತಾವು, you are the man. We are all joined together and give an opportunity to you to act as judge. You must act as judge. ಕರ್ನಾಟಕ ರಾಜ್ಯದ ಗೌರವವನ್ನು ಕಾಪಾಡಬೇಕೆಂದರೆ ನಮಗೆ ರಾಜ್ಯಪಾಲರ ಅಬ್‌ಸರ್ವರ್ ಮಾನೀಟರ್ ಮಾಡುವ ಅವಶ್ಯಕತೆ ಇಲ್ಲ. We are all friends, both the sides. You are the superior. ಆದರೆ ಅವರು ಬಂದಿರುವುದಕ್ಕೇನು ಕಾರಣ? ಯಾವ ಕಾರಣಕ್ಕಾಗಿ ಬಂದಿದ್ದಾರೆ? ಈಗ ಹೊರಗಡೆ ಹೋಗಿದ್ದಾರೋ? ಇನ್ನು ಯಾರಾದರೂ ಇಲ್ಲೇ ಇದ್ದಾರೆಯೆ? ತಾವೇನು ರೂಲಿಂಗ್ ಕೊಡುತ್ತೀರೋ ಅದಕ್ಕೆ ನಾವು ಕಾಯುತ್ತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾತನಾಡಲು ಎಷ್ಟು ಸಮಯ ನಿಗದಿ ಮಾಡಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಇದರ ಬಗ್ಗೆ ಮಾತನಾಡುವುದರಲ್ಲಿ ತಪ್ಪೇನಿದೆ?

ಶ್ರೀ ಆರಗ ಜ್ಞಾನೇಂದ್ರ : ಹಾಗಾದರೆ ಎಷ್ಟು ಜನರು ಮಾತನಾಡುವುದು? ಚರ್ಚೆಯಾಗುವುದಾದರೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಬಗ್ಗೆ ಇಡೀ ಸದನಕ್ಕೆ ಗೌರವವಿದೆ. ತಮ್ಮ ಬಗ್ಗೆಯೂ ಸಾಕಷ್ಟು ಗೌರವ ನಮಗಿದೆ. ಆದರೆ ರಾಜ್ಯಪಾಲರು ವೀಕ್ಷಕರನ್ನು ಕಳುಹಿಸಿ ಈ ಸದನಕ್ಕೆ ಅಗೌರವ ಮಾಡಿದ್ದಾರೆ. ಅವರು ಬಂದಿದ್ದು ಯಾವಾಗ? ಹೇಗೆ ಬಂದರು? ಹೋಗಿದ್ದಾರೋ ಇಲ್ಲವೋ ಎಂಬುದು ಮಹತ್ವವಲ್ಲ. ಅವರು ಒಳಕ್ಕೆ ಬರಬೇಕಾದರೆ ಹೇಗೆ ಬರಬೇಕೆಂದು ರೂಲ್ಸ್ ಮತ್ತು ರೆಗ್ಯುಲೇಷನ್‌ನಲ್ಲಿ ಬರೆದಿದ್ದಾರೆ. ಅವರು ಒಳಕ್ಕೆ ಬರಲು ಅನುಮತಿ ಕೊಟ್ಟವರು ಯಾರು? ತಮಗೇನಾದರೂ ಅಪ್ರೋಚ್ ಮಾಡಿದ್ದರೆ? ಏನು ಅವಶ್ಯಕತೆ ಇತ್ತು? ರಾಜ್ಯಪಾಲರಿಗೆ ತಮ್ಮ ಮೇಲೆ ವಿಶ್ವಾಸವಿಲ್ಲವೆ? ಸದನದ ಸದಸ್ಯರ ಮೇಲೆ ವಿಶ್ವಾಸವಿಲ್ಲವೆ? ಅವರ ಮೇಲೆ ನಮಗೆ ಗೌರವವಿದೆ. ಈಗಾಗಲೆ ಕೆಲವು ಸ್ನೇಹಿತರು ಹೇಳಿದಂತೆ ಇವತ್ತು ವಿಶ್ವಾಸ ಮತ ಯಾಚಿಸಿ ಪ್ರಸ್ತಾವ ಇದೆ. ಆ ವಿಷಯವಾಗಿ ವಿಧಾನಸಭೆಯ ಅಧಿವೇಶನ ನಡೆದಾಗ, ಯಾವ ದಿನ ಒಬ್ಬರು ಮುಖ್ಯಮಂತ್ರಿ ವಿಶ್ವಾಸ ಮತವನ್ನು ಯಾಚಿಸಬೇಕು ಎಂಬುದನ್ನು ತಾವು ನಿರ್ಣಯ ಮಾಡಬೇಕು. ಆ ವಿಚಾರದ ಬಗ್ಗೆ ಹೆಚ್ಚು ಹೋಗದೆ, ತಾವೇನು ನಿರ್ಣಯ ಕೊಡುತ್ತೀರಿ ಆ ನಿರ್ಣಯ ಈ ಸದನದ ಇತಿಹಾಸದಲ್ಲಿ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದಕ್ಕೆ ಸುವರ್ಣಾಕ್ಷರದಲ್ಲಿ ಹೋಗಬೇಕಾಗುತ್ತದೆ. ಹಾಗಾಗಿ ತಾವು ಈ ವಿಷಯದಲ್ಲಿ ನಿರ್ಣಯ ಮಾಡಬೇಕು. ಈಗ ತಾವು ರೂಲಿಂಗ್‌ನ್ನು ಕೊಡಬೇಕು, ರೂಲಿಂಗ್‌ನ್ನು ಕೊಟ್ಟು ಮುಂದಿನ ಅಜೆಂಡಾಕ್ಕೆ ಹೋಗಬೇಕಾಗಿ ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಎಲ್ಲಾ ಸದಸ್ಯರಲ್ಲೂ ನನ್ನ ವಿನಂತಿ ಏನೆಂದರೆ, ಇದರ ಬಗ್ಗೆ ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಮಾನ್ಯ ರಾಜ್ಯಪಾಲರ ಕಛೇರಿಯ ಅಧಿಕಾರಿಗಳು ನಿರ್ಗಮಿಸಿದ್ದಾರೆ. ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಅನಂತರ ರೂಲಿಂಗ್ ಕೊಡುತ್ತೇನೆ. ಆದ್ದರಿಂದ ದಯಮಾಡಿ ಎಲ್ಲರೂ ಸಹಕರಿಸಿ. ಈಗ ಮುಂದಿನ ವಿಚಾರಕ್ಕೆ ಹೋಗೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನು ಕೇಳಿ, ಸಂವಿಧಾನದ 152 ರಿಂದ 162ರ ಅನುಚ್ಛೇದದವರೆಗೆ ರಾಜ್ಯಪಾಲರ ಅಧಿಕಾರವೇನು ಎಂಬುದು ಇದೆ. ಅನಂತರ 178 ರಿಂದ ಸ್ಪೀಕರ್‌ರವರ ಅಧಿಕಾರಗಳೇನು ಎಂಬುದು ಇದೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ರಮೇಶ್ ಭಂಡಾರಿಯವರನ್ನು ವಾಪಸ್ ಕರೆಸಿಕೊಂಡರು. ಆಗ ಮುಲಾಯಂಸಿಂಗ್‌ರವರು ಡಿಫೆನ್ಸ್ ಮಂತ್ರಿಯಾಗಿದ್ದರು, ಅವರನ್ನು ವಾಪಸ್ ಕರೆಸಿಕೊಂಡರು. ಇವತ್ತೂ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ, ಯಾವ ಪರಿಸ್ಥಿತಿಯಲ್ಲಿ ನಾವು ಇದ್ದೇವೆಂದರೆ, ಒಂದು ನೀವು ಅವರಿಗೆ ಪರ್ಮಿಷನ್ ಕೊಟ್ಟಿದ್ದೀರಾ? ಕೊಟ್ಟಿದ್ದರೆ ಅದು ತಪ್ಪಾಗುತ್ತದೆ. ಒಂದು ವೇಳೆ ತಾವು

ಪರ್ಮಿಷನ್ ಕೊಡದೆಯೇ ಅವರು ಬಂದಿದ್ದರೆ. xxx ಯಾವ ರೀತಿಯಲ್ಲಿ ಅವರು ಅವರ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿದರು? ಒಂದುವೇಳೆ ಅವರು ನಿಮ್ಮ ಬಗ್ಗೆ ಅನುಮಾನ ಪಟ್ಟಿದ್ದರೆ, ಈ ಸದನದ ಬಗ್ಗೆ ಅನುಮಾನ ಪಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರಕ್ಕೆ ಬರೆಯಬೇಕಾಗುತ್ತದೆ. ಆದ್ದರಿಂದ ಇದು ಏನು ಸಣ್ಣ ವಿಷಯವಲ್ಲ, ಇಲ್ಲಿಗೆ ಅವರು ಬಂದರು, ಹೋದರು ಎಂದು ಮುಚ್ಚಿಹಾಕಿ ಮುಂದೆ ಹೋಗುವುದಿಲ್ಲ. ಘನತೆವೆತ್ತ ಮಾನ್ಯ ರಾಜ್ಯಪಾಲರು ಅವರ ಅಧಿಕಾರಿಗಳನ್ನು ಇಲ್ಲಿ ಏಕೆ ಕಳುಹಿಸಿದರು? ಅದರ ಬಗ್ಗೆ ಚರ್ಚೆಯಾಗಬೇಕು. ಅದರ ಬಗ್ಗೆ ಮುಂದಿನ ಕ್ರಮವೇನು ಎಂಬ ಬಗ್ಗೆ ತಾವು ತೀರ್ಮಾನ ಕೊಟ್ಟಮೇಲೆ ಮುಂದೆ ಹೋಗಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಪಡೆದು ಮಾತನಾಡಲು ಇಚ್ಛಿಪಡುತ್ತೇನೆ. ಈಗಾಗಲೇ ಸದನದಲ್ಲಿ ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದಂತೆ ಮಾನ್ಯ ರಾಜ್ಯಪಾಲರು ಯಾವ ಕಾರಣಕ್ಕಾಗಿ ತಮ್ಮ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿದರು? ಅದು ನಮಗೆ ಮೊದಲನೆಯದಾಗಿ ಗೊತ್ತಾಗಬೇಕು. Reason ಗೊತ್ತಾಗಬೇಕಲ್ಲ? Why they have come? ಯಾವ ಕಾರಣಕ್ಕಾಗಿ ಅವರು ತಮ್ಮ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿದರು? ನಿಮ್ಮ ಪರಮ ಅಧಿಕಾರವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೂ ಕೂಡ ಇಂಥ ಸೂಕ್ಷ್ಮ ಪರಿಸ್ಥಿತಿಯಲ್ಲಿ ಮಾನ್ಯ ರಾಜ್ಯಪಾಲರು ಕಳುಹಿಸಿದಂಥ ಅಧಿಕಾರಿಗಳು ಸಾಮಾನ್ಯವಾಗಿ ಹೌಸ್‌ನಲ್ಲಿ ಬಿಸ್‌ನೆಸ್ ನಡೆಯುವಾಗ ಅಧಿಕಾರಿಗಳು ಕುಳಿತುಕೊಳ್ಳುವಂಥ ಸ್ಥಳದಲ್ಲಿ ಏಕೆ ಕುಳಿತಿದ್ದಾರೆ? ಮೂರನೆಯದಾಗಿ, ಮಾನ್ಯ ರಾಜ್ಯಪಾಲರವರ ಸಂದೇಶಗಳ ಬಗ್ಗೆ ಸದನದ ನಿಯಮಾವಳಿ ಏನು ಹೇಳುತ್ತದೆ ಎಂದರೆ,

> **"ರಾಜ್ಯಪಾಲರ ಸಂದೇಶಗಳು** : ಸಂವಿಧಾನದ 175(2)ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲರಿಂದ ಸಂದೇಶವು ಅಧ್ಯಕ್ಷರಿಗೆ ಬಂದರೆ, ಆ ಸಂದೇಶವನ್ನು ಅವರು ಸದನದ ಮುಂದೆ ಓದತಕ್ಕದ್ದು ಹಾಗೂ ಸಂದೇಶದಲ್ಲಿ ಹೇಳಿದ ವಿಷಯಗಳನ್ನು ಪರಿಶೀಲಿಸಲು ಅನುಸರಿಸಬೇಕಾದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಅವಶ್ಯ ನಿರ್ದೇಶನಗಳನ್ನು ನೀಡತಕ್ಕದ್ದು. ನಿರ್ದೇಶನಗಳನ್ನು ಕೊಡುವಾಗ, ಅವಶ್ಯವಾದಷ್ಟು ಮಟ್ಟಿಗೆ ನಿಯಮಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ಇಲ್ಲವೆ, ಬದಲಾಯಿಸುವ ಅಧಿಕಾರವುಳ್ಳವರಾಗಿರಬೇಕು."

ನಾನೇನು ಹೇಳುತ್ತೇನೆ ಎಂದರೆ, ಸಂವಿಧಾನದ 175ನೇ ಅನುಚ್ಛೇದದ ಮೇರೆಗೆ ಮಾನ್ಯ ರಾಜ್ಯಪಾಲರ ಸಂದೇಶವೇನಾದರೂ ನಿಮಗೆ ಬಂದಿದ್ದರೆ, ಅದನ್ನು ತಾವು ಮೊದಲು ಈ ಸದನಕ್ಕೆ ತಿಳಿಸಬೇಕಾಗುತ್ತದೆ. ಅದನ್ನು ತಾವು ತಿಳಿಸಿಲ್ಲ. ಅದರ ಜೊತೆಗೆ ಇವತ್ತು ಕಾರ್ಯಕಲಾಪಗಳ ಪಟ್ಟಿ ಏನು ಕೊಟ್ಟಿದ್ದೀರೋ ಅದರಲ್ಲಿ ಇದರ ಬಗ್ಗೆ ಏನೂ ವಿಚಾರ ಇಲ್ಲ. ಅದರಲ್ಲಿ ಮೊದಲನೆಯದಾಗಿ "ಸಂತಾಪ ಸೂಚನೆ" ಹಾಗೂ ಎರಡನೆಯದಾಗಿ "ಕಾರ್ಯದರ್ಶಿಗಳ ವರದಿ" ಎಂದಿದೆಯಷ್ಟೆ. ಇದು ಬಿಟ್ಟರೆ ರಾಜ್ಯಪಾಲರ ಸಂದೇಶದ ಬಗ್ಗೆ, ರಾಜ್ಯಪಾಲರ ವಿಚಾರದ ಬಗ್ಗೆ ಇವತ್ತಿನ ಅಜೆಂಡಾದಲ್ಲಿ ಏನೂ ಇಲ್ಲ. ಆ ಪ್ರಶ್ನೆಯೇ ಇಲ್ಲಿಲ್ಲ. ಇವತ್ತಿನ ಅಜೆಂಡಾದಲ್ಲಿ ಅದು ಇಲ್ಲ. "ಕಾರ್ಯದರ್ಶಿಗಳ

xxx ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ವರದಿ" ನಂತರ ಬೇರೇನನ್ನೂ ಅಜೆಂಡಾದಲ್ಲಿ ನಮೂದಿಸಿಲ್ಲ. ರಾಜ್ಯಪಾಲರ ಸಂದೇಶವೇನಾದರೂ under Article 175 of the Indian Constitution ತಮಗೆ ಬಂದಿದ್ದರೆ, ಅದನ್ನು ತಾವು ಸದನಕ್ಕೆ ತಿಳಿಸಬೇಕಾಗುತ್ತದೆ. ಆ ಪ್ರಶ್ನೆಗೆ ನಾನು ಮುಂದೆ ಬರುತ್ತೇನೆ. ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ. xxx ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಸನ್ಮಾನ್ಯ ರಾಜ್ಯಪಾಲರು ಮೊನ್ನೆ ದಿವಸ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅದರ ಒಂದು ದಿವಸ ಮೊದಲು ಭಾರತೀಯ ಜನತಾ ಪಕ್ಷದವರು ಮತ್ತು ಬಂಡಾಯವೆದ್ದಂತಹ ಜಾತ್ಯಾತೀತ ಜನತಾದಳದ ಸದಸ್ಯರು.....

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಯಾರು ಬಂಡಾಯ ಎದ್ದಿದ್ದಾರೆ? ಈ ರೀತಿ ಮಾತನಾಡುವುದನ್ನು ನಿಲ್ಲಿಸಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಮ್ಮ ಅಭಿಪ್ರಾಯ ತಾವು ಹೇಳಿದ್ದೀರಿ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ನಮ್ಮನ್ನು ಪ್ರಶ್ನೆ ಮಾಡಲಿಕ್ಕೆ ಇವರ್ಯಾರು? .....

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಒಮ್ಮೆಲೇ ಎದ್ದು ನಿಂತು ಮಾತನಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಾಯರೆಡ್ಡಿಯವರೆ, ತಾವು ದಯಮಾಡಿ ಮೊದಲು ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಹೇಳಿದ್ದೀರಿ. ಈಗಾಗಲೇ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಬಂದಂತಹ ಅಧಿಕಾರಿಗಳು ನಿರ್ಗಮಿಸಿದ್ದಾರೆ. ಅನೇಕ ಗಂಭೀರವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಇವೆಲ್ಲವನ್ನೂ ನಾನು ಪರಿಶೀಲನೆ ಮಾಡುತ್ತೇನೆ. ಪರಿಶೀಲನೆ ಮಾಡಿ ನನ್ನ ರೂಲಿಂಗ್ ಅನ್ನು ಕೊಡುತ್ತೇನೆ. ನನ್ನ ರೂಲಿಂಗ್ ಅನ್ನು ನಾನು reserve ಮಾಡಿದ್ದೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಆ ಬಗ್ಗೆ ಈಗಲೇ ಹೇಳಬೇಕಾಗುತ್ತದೆ.

ಅಧ್ಯಕ್ಷರು : ತಾವು ಮಂತ್ರಿಗಳಾಗಿದ್ದವರು, ಈಗಲೂ ಮಂತ್ರಿಗಳಾಗಿಯೇ ಇದ್ದೀರಿ. ದಯಮಾಡಿ ಕುಳಿತುಕೊಳ್ಳಿ. ನನ್ನ ರೂಲಿಂಗ್ ಅನ್ನು ನಾನು ರಿಸರ್ವ್ ಮಾಡಿದ್ದೇನೆ. ದಯಮಾಡಿ ಎಲ್ಲರೂ ಸಹಕರಿಸಿ. ನಾವು ಈಗ ಮುಂದಿನ ಕಲಾಪವಾದ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳೋಣ. ಈಗ ಸಂತಾಪ ಸೂಚನೆ.

(ಗೊಂದಲ)

ಅಧ್ಯಕ್ಷರು : ನಾನು ಈಗಾಗಲೇ ನನ್ನ ರೂಲಿಂಗ್ ಅನ್ನು reserve ಮಾಡಿದ್ದೇನೆ ಎಂದು ಹೇಳಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅನೇಕ ಗಹನವಾದ ವಿಚಾರಗಳು ಇದರಲ್ಲಿ ಅಡಕವಾಗಿವೆ. ನಾನು ಎಲ್ಲವನ್ನು ವಿಚಾರ ಮಾಡಿ ನನ್ನ ರೂಲಿಂಗ್ ಅನ್ನು ಕೊಡುತ್ತೇನೆ. ನಾನು ನನ್ನ ರೂಲಿಂಗ್ ಅನ್ನು reserve ಮಾಡಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ತಮ್ಮ ತೀರ್ಪನ್ನು ಈಗಲೇ ಕೊಡಬೇಕಾಗುತ್ತದೆ. ಆ ತೀರ್ಪನ್ನು ತಾವು ಕೊಡದೆ ಸದನ ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನೀವು ರೂಲಿಂಗ್ ಈಗಲೇ ಕೊಡಬೇಕೆಂದು ಹೇಳುತ್ತಿದ್ದೀರಿ. ನಾನು ನನ್ನ ರೂಲಿಂಗ್ ಅನ್ನು reserve ಮಾಡಿದ್ದೇನೆಂದು ಸ್ಪಷ್ಟವಾಗಿ ಹೇಳಿದ ಮೇಲೆ ಮತ್ತೆ ಮತ್ತೆ ಆ ವಿಚಾರ ಎತ್ತಿ ಮಾತನಾಡುವುದು ಸರಿಯಲ್ಲ. ಈಗ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇನೆ. ಇದನ್ನು ಇಲ್ಲಿಗೇ ಮುಗಿಸೋಣ. ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟು ಮುಂದಿನ subject ಅನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ತೀರ್ಪು ಕೊಡದೆ ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ರೂಲಿಂಗ್ ಕೊಡದೆ ತಾವು ಮುಂದಿನ ಕಾರ್ಯಕ್ರಮಕ್ಕೆ ಹೋಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ನಾನು ನನ್ನ ರೂಲಿಂಗ್ ಅನ್ನು reserve ಮಾಡಿದ್ದೇನೆ ಎಂದು ಹೇಳಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಕಲಾಪ ನಡೆಸಲು ಸಹಕರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, I am on a Point of Order. ದಯಮಾಡಿ ಅದನ್ನು ಕೇಳಬೇಕು. ಕೆಲವು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿಯಾಗಿದೆ. ಸನ್ಮಾನ್ಯ ಬಸವರಾಜ್ ಹೊರಟ್ಟಿಯವರು ಇಲ್ಲೇ ಕುಳಿತಿದ್ದಾರೆ. ಅವರ ರಾಜೀನಾಮೆ accept ಆಗಿದೆಯೋ ಇಲ್ಲವೋ? ಆಗಿದ್ದರೆ, ಅವರು ಈ ಮನೆಯ ಸದಸ್ಯರಲ್ಲ. ಅವರು ಇಲ್ಲಿ ಬಂದು ಕುಳಿತಿದ್ದಾರೆ. ಅದರ ಬಗ್ಗೆ ತಾವು ಏನು ರೂಲಿಂಗ್ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಅವರು ಮಂತ್ರಿಗಳಾಗಿದ್ದಾರೋ ಇಲ್ಲವೋ ಎಂಬುದನ್ನು ಹೇಳಬೇಕು. ಅವರು ಮಂತ್ರಿಗಳಾಗಿಲ್ಲದಿದ್ದರೆ ಅವರು ಇಲ್ಲಿಗೆ ಏಕೆ ಬಂದಿದ್ದಾರೆ ಎಂಬುದನ್ನಾದರೂ ಹೇಳಬೇಕು. I want to know this. ಸರ್ಕಾರದ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿ....

ಅಧ್ಯಕ್ಷರು : ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಅವರು ಮಂತ್ರಿಗಳಾಗಿ ಬಂದಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

Sri J.C. Madhuswamy : He is not a member of this House. ಈ ಮನೆಯ ಸದಸ್ಯರಲ್ಲದವರು ಇಲ್ಲಿ ಕುಳಿತುಕೊಳ್ಳಬಹುದೇ ಎಂಬ ಬಗ್ಗೆ ನನಗೆ ಹೇಳಬೇಕು.

ಅಧ್ಯಕ್ಷರು : ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಅವರು ಮಂತ್ರಿಗಳಾಗಿರುವುದರಿಂದಲೇ ಅಲ್ಲಿ ಬಂದು ಕುಳಿತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಈಗ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ಪಿ.ಎಂ. ಸಯೀದ್, ರಾಜ್ಯದ .....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡದೆ ಕಲಾಪ ಮುಂದುವರೆಸುತ್ತಿರುವುದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನೂ ತಾವು ರೂಲಿಂಗ್ ಈಗಲೇ ಕೊಡದಿರುವುದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು : ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಮತ್ತೆ chair ಅನ್ನು defy ಮಾಡಬೇಡಿ. ತಾವು ಮತ್ತೆ ಮತ್ತೆ chair ಅನ್ನ defy ಮಾಡುವುದು ಸರಿಯಲ್ಲ. ನನ್ನ ರೂಲಿಂಗ್ ಅನ್ನು ನಾನು reserve ಮಾಡಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್ ಮತ್ತು ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

2. ಸಂತಾಪ ಸೂಚನೆ

ವಿಷಯ: ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಮತ್ತಿತರ ಗಣ್ಯರ ನಿಧನ.

ಅಧ್ಯಕ್ಷರು : ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ಪಿ.ಎಂ. ಸಯೀದ್, ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಬಿ.ಎಸ್. ಪಾಟೀಲ್, ಶ್ರೀ ಪಿ.ಪಿ. ಹೆಗರೆ, ಮಾಜಿ ಸಂಸತ್ ಸದಸ್ಯರಾಗಿದ್ದ ಶ್ರೀ ವಿ. ಕೃಷ್ಣರಾವ್, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಜಿ. ನಾರಾಯಣ ಕುಮಾರ್, ಶ್ರೀ ಶಂಕರ್ ಎಸ್. ಕರನಿಂಗ್, ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ, ಶ್ರೀ ಕೆ.ಎಂ. ಪುಟ್ಟು, ಶ್ರೀ ಯು.ಕೆ. ಶಾಮಣ್ಣ, ಶ್ರೀ ಭೀಮನೇನಿ ಕೊಂಡಯ್ಯ, ಶ್ರೀ ಸಿ.ವಿ. ಪುಡಕಲಕಟ್ಟಿ, ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಚನ್ನಬಸವಯ್ಯ, ಡಾ: ಎಂ.ಆರ್. ತಂಗಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಹೆಚ್.ಎಲ್. ನಾಗೇಗೌಡ, ಡಾ: ಎಂ.ಸಿ. ಮೋದಿ, ಗಣ್ಯ ವ್ಯಕ್ತಿಗಳಾದ ಶ್ರೀಮತಿ ಶಾಂತಾದೇವಿ ಮಾಳವಾಡ, ಡಾ: ಎಲ್.ಆರ್. ಹೆಗಡೆ, ಡಾ: ಡಿ.ಎಂ. ನಂಜುಂಡಪ್ಪ, ಶ್ರೀ ಎಸ್.ಜಿ. ಮೈಸೂರುಮಠ, ಶ್ರೀ ಕೆ. ರಾಜಾರಾವ್, ಶ್ರೀ ವಜ್ರಮುನಿ ಹಾಗೂ ಶ್ರೀ ಸಿ.ಜಿ. ಕೃಷ್ಣಸ್ವಾಮಿ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಕೆ.ಆರ್. ನಾರಾಯಣನ್

ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಕೆ.ಆರ್. ನಾರಾಯಣನ್ ಅವರು 1920ರ ಅಕ್ಟೋಬರ್ 27ರಂದು ಕೇರಳದ ಕೊಟ್ಟಾಯಂ ಜಿಲ್ಲೆಯ ಉಳವೂರು ಗ್ರಾಮದಲ್ಲಿ ಜನಿಸಿದ್ದು, ಉಪನ್ಯಾಸಕರಾಗಿ ವೃತ್ತಿಯನ್ನು ಪ್ರಾರಂಭಿಸಿ ನಂತರ ಹಲವಾರು ಪತ್ರಿಕೆಗಳ ವರದಿಗಾರರಾಗಿದ್ದರು. 1949ರಲ್ಲಿ ಶ್ರೀ ನಾರಾಯಣನ್ ಅವರು ವಿದೇಶಾಂಗ ಸೇವೆಗೆ ಸೇರಿ ಹಲವಾರು ದೇಶಗಳಲ್ಲಿ ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿಯ ನಂತರ ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಕುಲಪತಿಯಾಗಿಯೂ ಕೆಲಸ ನಿರ್ವಹಿಸಿ ನಂತರ ಸಕ್ರಿಯ ರಾಜಕಾರಣದಲ್ಲಿ